ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 12, 2024

ಸಂಪುಟ : 51 ಸಂಚಿಕೆ : 120 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



**ಡಿಜೆ ಸದ್ದಿಲ್ಲ.. ಭಜನೆ ಸದ್ದೇ ಎಲ್ಲಾ ...!**

ಮಲೇಬೆನ್ನೂರು ಸಮೀಪದ ಭಾನುವಳ್ಳಿ ಗ್ರಾಮದಲ್ಲಿ ಏಕಲವ್ಯ ಯುವಕ ಸಂಘದಿಂದ ಪ್ರತಿಷ್ಠಾಪಿಸಲಾಗಿದ್ದ ಗಣಪತಿ ಮೂರ್ತಿಯನ್ನು ಸೋಮವಾರ ಎತ್ತಿನ ಬಂಡಿಯಲ್ಲಿ ಇಟ್ಟು, ಭಜನೆ, ಬ್ಯಾಂಡ್, ಹಲಗೆ ಮೇಳಗಳ ಮೂಲಕ ಮೆರವಣಿಗೆ ಮಾಡಿ ನಂದಿಗುಡಿ ಬಳಿಯ ತುಂಗಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು. ಡಿಜೆ ಸದ್ದಿನ ಆರ್ಭಟದಲ್ಲಿಯೇ ವಿಸರ್ಜನೆ ನಡೆಯುವ ದಿನಗಳಲ್ಲಿ ಈ ಮೆರವಣಿಗೆ ವಿಶೇಷವಾಗಿತ್ತು.

# ಪೌರ ಕಾರ್ಮಿಕರ ಮಕ್ಕಳೂ ಅಧಿಕಾರಿಗಳಾಗಲಿ

## ಮಕ್ಕಳ ವಿದ್ಯಾಭ್ಯಾಸಕ್ಕೆ ಒತ್ತು ನೀಡುವಂತೆ ಪೌರ ಕಾರ್ಮಿಕರಿಗೆ ಪಾಲಿಕೆ ಆಯುಕ್ತೆ ರೇಣುಕಾ ಕರೆ

ದಾವಣಗೆರೆ, ಸೆ.11- ನಿಮ್ಮ ಮಕ್ಕಳೂ ನಮ್ಮಂತೆ ಅಧಿಕಾರಿಗಳಾಗಲಿ. ಅದಕ್ಕಾಗಿ ನೀವು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಿ ಎಂದು ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ ಪೌರ ಕಾರ್ಮಿಕರಿಗೆ ಕರೆ ನೀಡಿದರು.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 58ನೇ ಅಂತರ ರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಪಾಲಿಕೆಯಲ್ಲಿ 11 ಜನರಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡಲಾಗಿದೆ. ಈ ಪೈಕಿ ಒಬ್ಬರು ಮಾತ್ರ ಪದವಿ ಪಡೆದಿದ್ದರಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆ ನೀಡಲಾಗಿದೆ. ಉಳಿದಂತೆ ಹತ್ತು ಜನರಿಗೆ ಕಡಿಮೆ ವಿದ್ಯಾಭ್ಯಾಸದ ಕಾರಣ 'ಡಿ' ದರ್ಜೆ ನೌಕರಿ ನೀಡಲಾಗಿದೆ ಎಂದರು.

ಪೌರ ಕಾರ್ಮಿಕರ ದಿನದಂದು ಪೌರ ಕಾರ್ಮಿಕರಿಗೆ ಗೌರವ ಧನ ನೀಡಲಾಗುತ್ತದೆ. ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಿ. ಕೆಲಸ ಮುಗಿದ ಮೇಲೆ ಮನೆಯಲ್ಲಿ ಟಿವಿ ಧಾರಾವಾಹಿ ನೋಡುವುದು ಕಡಿಮೆ ಮಾಡಿ. ಮಕ್ಕಳ ವಿದ್ಯಾಭ್ಯಾಸದತ್ತ ಗಮನ ಹರಿಸಿ ಎಂದು ಕಿವಿ ಮಾತು ಹೇಳಿದರು. ಸಹಿ ಮಾಡುವುದನ್ನೂ ಕಲಿಯಲಿಲ್ಲ ಎಂದರೆ ನಿಮ್ಮ ವೇತನ ಅಥವಾ ಸೌಲಭ್ಯಗಳು ಬೇರೆಯವರ ಪಾಲಾಗುವ ಸಾಧ್ಯತೆ ಇದೆ. ಈ ಕಾರಣಕ್ಕಾಗಿ ನೀವೂ ಸಹ ಸಾಕ್ಷರರಾಗಬೇಕು ಎಂದರು.

ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ (4ನೇ ಪುಟಕ್ಕೆ)



### 259 ಗ್ರಾ.ಪಂ. ಸದಸ್ಯರು ಅನಕ್ಷರಸ್ಥರು: ಸಿಇಒ

ಜಿಲ್ಲೆಯ 74 ಗ್ರಾಮಗಳನ್ನು ಸಂಪೂರ್ಣ ಸಾಕ್ಷರತೆ ಹೊಂದಿರುವ ಗ್ರಾಮಗಳೆಂದು ಗುರುತಿಸಲಾಗಿದೆ. ಜಿಲ್ಲೆ ಶೇ. 85 ರಷ್ಟು ಸಾಕ್ಷರತಾ ಪ್ರಮಾಣ ಹೊಂದಿದ್ದು ಶೇ 100 ರಷ್ಟು ಸಾಧಿಸಲು ಎಲ್ಲರೂ ಶ್ರಮಿಸಬೇಕೆಂದು ಜಿ.ಪಂ. ಸಿಇಒ ಸುರೇಶ್ ಬಿ.ಇಟ್ನಾಳ್ ಹೇಳಿದರು.

ಪಾಲಿಕೆಯ ಎಲ್ಲಾ ಪೌರಕಾರ್ಮಿಕರನ್ನು ಸಾಕ್ಷರರನ್ನಾಗಿಸಲು ನಿರ್ದೇಶನ ನೀಡಿದ್ದು, ಅವರು ಸಮೀಕ್ಷೆ ಕೈಗೊಂಡು ಪಾಲಿಕೆಯಲ್ಲಿ ಒಟ್ಟು 440 ಅನಕ್ಷರಸ್ಥರಿದ್ದು ಇವರನ್ನು ಸಾಕ್ಷರರನ್ನಾಗಿಸಲು 120 ಗಂಟೆಗಳ ಕಾಲ ಕಲಿಕೆ ಮತ್ತು 80 ಗಂಟೆಗಳ (4ನೇ ಪುಟಕ್ಕೆ)

# ಅಖಿಲ ಭಾರತ ವೀರಶೈವ ಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಸತತ 3ನೇ ಬಾರಿಗೆ ಎಸ್ಸೆಸ್ ಆಯ್ಕೆ

ಬೆಂಗಳೂರು, ಸೆ.11- ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮಹಾಸಭಾದ ಅಧ್ಯಕ್ಷರಾಗಿ ಮತ್ತೊಂದು ಅವಧಿಗೆ ಆಯ್ಕೆಯಾಗಿದ್ದಾರೆ.

ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಇದೇ ದಿನಾಂಕ 29ರಂದು ಚುನಾವಣೆ ನಿಗದಿಯಾಗಿತ್ತು. ಆದರೆ, ಉಮೇದುವಾರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದ ಇಂದಿನವರೆಗೆ ಎಸ್ಸೆಸ್ ಅವರನ್ನು ಹೊರತುಪಡಿಸಿದರೆ, ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ, ಅವರ ಆಯ್ಕೆಯ ಘೋಷಣೆಗೆ ಸುಗಮ ದಾರಿಯಾದಂತಾಗಿದೆ.

ಎಸ್ಸೆಸ್ ಅವರ ಅವಿರೋಧ ಆಯ್ಕೆ ಕುರಿತಂತೆ ನಿವೃತ್ತ ಹಿರಿಯ ಐಎಎಸ್ ಅಧಿಕಾರಿಯೂ ಆಗಿರುವ ವೀರಶೈವ ಮಹಾಸಭಾದ ಮುಖ್ಯ ಚುನಾವಣಾಧಿಕಾರಿ ಎಂ.ಬಿ. ದ್ಯಾಬೇರಿ ಅವರು ಅಧಿಕೃತವಾಗಿ ಘೋಷಣೆ ಮಾಡಬೇಕಿದೆ.

ಈ ಚುನಾವಣೆಯು ಪ್ರತೀ 5 ವರ್ಷಗಳಿಗೊಮ್ಮೆ ನಡೆಯಲಿದ್ದು, ಎಸ್ಸೆಸ್ ಅವರು ಎರಡು ಅವಧಿಗಳನ್ನು ಈಗಾಗಲೇ ಪೂರೈಸಿದ್ದು, ಸತತ ಮೂರನೇ ಅವಧಿಗೆ ಮಹಾಸಭಾದ ಸಾರಥ್ಯ ವಹಿಸಲಿದ್ದಾರೆ.



## ಪ್ರಸಂಗ ಬಂದರೆ ನಾನೂ ಸಿಎಂ ಸ್ಥಾನಕ್ಕೆ ಸ್ಪರ್ಧಿಸುತ್ತೇನೆ: ಎಸ್ಸೆಸ್

ದಾವಣಗೆರೆ, ಸೆ. 11- ಮುಖ್ಯಮಂತ್ರಿ ಬದಲಾವಣೆ ಪ್ರಸಂಗ ಬಂದರೆ ನಾನೂ ಸ್ಪರ್ಧಿಸುತ್ತೇನೆ ಎಂದು ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜಕೀಯದಲ್ಲಿ ಜ್ಯೂನಿಯರ್, ಸೀನಿಯರ್ ಎನ್ನುವ ಪ್ರಶ್ನೆ ಬರುವುದಿಲ್ಲ.

ಶಾಸಕರು ಯಾರಿಗೆ ಬಹುಮತ ನೀಡುತ್ತಾರೋ ಅವರಿಗೆ ಹೈ ಕಮಾಂಡ್ 'ಎಸ್' ಎನ್ನುವುದು ರೂಢಿ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಅವರು ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಹೈಕಮಾಂಡ್ ಆಶೀರ್ವಾದ ಇರುವವರೆಗೂ ಅವರೇ ಅಧಿಕಾರ ಮಾಡಲಿ ಎಂದ ಅವರು, ಕೆಲವರು ಬಾಯಿಗೆ ಬಂದಂತೆ ಮಾತನಾಡಿ ಹಗುರಾಗುತ್ತಾರಷ್ಟೇ ಎಂದು ಹೇಳಿದರು.

## ಜಿಎಸ್ಟಿ ಅಧಿಕಾರಿಗಳಿಂದ ಉದ್ಯಮಿ ಅಪಹರಣ !

ಬೆಂಗಳೂರು, ಸೆ. 11 - ಅಪಹರಣ ಹಾಗೂ ವಸೂಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಜಿ.ಎಸ್.ಟಿ. ಅಧಿಕಾರಿಗಳನ್ನು ಬೆಂಗಳೂರು ನಗರ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ. ಉದ್ಯಮಿಯೊಬ್ಬರು ಬೈಯ್ಯಪ್ಪನಹಳ್ಳಿ ಪೊಲೀಸ್ ಠಾಣೆಗೆ ನೀಡಿದ ದೂರು ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

**1.50 ಕೋಟಿ ರೂ. ವಸೂಲಿ ಮಾಡಿದ ನಾಲ್ವರ ಬಂಧನ**

ಕಳೆದ ವಾರ ನಾಲ್ಕೈದು ವ್ಯಕ್ತಿಗಳು ನನ್ನ ಮನೆಗೆ ನುಗ್ಗಿದ್ದರು. ನನ್ನನ್ನು ವಾಹನದಲ್ಲಿ ಕರೆದೊಂಡು ಹೋಗಿ ಭಾರೀ ಹಣದ (4ನೇ ಪುಟಕ್ಕೆ)

## ಮುಡಾ ಪ್ರಕರಣ : ಇಂದು ಸಿಎಂ ಅರ್ಜಿ ವಿಚಾರಣೆ

ಬೆಂಗಳೂರು, ಸೆ.11- ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ರಾಜಭವನ ತಮ್ಮ ವಿರುದ್ಧ ನೀಡಿರುವ ಪ್ರಾಸಿಕ್ಯೂಷನ್ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿಯ ಮುಂದುವರೆದ ವಿಚಾರಣೆಯನ್ನು ಹೈಕೋರ್ಟ್ ನಾಳೆ ಮಧ್ಯಾಹ್ನ (4ನೇ ಪುಟಕ್ಕೆ)

# ಭಾರತ ಸೆಮಿಕಂಡಕ್ಟರ್ ಕ್ರಾಂತಿ ಅಂಚಿನಲ್ಲಿದೆ : ಪ್ರಧಾನಿ ಮೋದಿ

ಗ್ರೇಟರ್ ನೋಯ್ಡಾ, ಸೆ. 11 - ಯಾವುದೇ ಬಿಕ್ಕಟ್ಟು ಎದುರಾದರೂ, ಉತ್ಪಾದನಾ ವಲಯ ನಿರಂತರವಾಗಿ ಕಾರ್ಯನಿರ್ವಹಿಸಬೇಕು ಎಂಬುದೇ ನಮ್ಮ ಗುರಿ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಸೆಮಿಕಾನ್ 2024 ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪೂರೈಕೆ ಜಾಲ ಎಷ್ಟು ಮಹತ್ವದ್ದು ಎಂಬುದನ್ನು ಕೊರೊನಾ ಮಹಾಮಾರಿಯ ಸಮಯ ತೋರಿಸಿತ್ತು. ಪೂರೈಕೆ ಜಾಲದಲ್ಲಿ ಸಮಸ್ಯೆಯಾದ ಕಾರಣ ಎಲ್ಲ ಉದ್ಯಮಗಳು ಸಮಸ್ಯೆ ಎದುರಿಸಬೇಕಾಯಿತು ಎಂದರು.

ಈ ಹಿನ್ನೆಲೆಯಲ್ಲಿ ಮೊಬೈಲ್, ಎಲೆಕ್ಟ್ರಾನಿಕ್ಸ್ ಹಾಗೂ ಸೆಮಿಕಂಡಕ್ಟರ್ ಸೇರಿದಂತೆ ಎಲ್ಲ ಉತ್ಪಾದನೆಗಳು ಬಿಕ್ಕಟ್ಟಿನ ಸಮಯದಲ್ಲಿ ನಿಲ್ಲಬಾರದು. ನಿರಂತರವಾಗಿ ಉತ್ಪಾದನೆ ಮುಂದುವರೆಯುವ ವ್ಯವಸ್ಥೆ ಬೇಕು ಎಂದು ಮೋದಿ ಹೇಳಿದರು.

ಪೂರೈಕೆ ಜಾಲದ ನಿರ್ವಹಣೆಯಲ್ಲಿ ಭಾರತ ಜಾಗತಿಕವಾಗಿ ಮಹತ್ವದ ಪಾತ್ರ ವಹಿಸುತ್ತಿದೆ. ಇದು ಭಾರತಕ್ಕೆ ಸೂಕ್ತ ಸಮಯವಾಗಿದೆ. 21ನೇ ಶತಮಾನದಲ್ಲಿ ಭಾರತ ಎಂದೂ ಹಿಂದೆ ಸರಿಯುವುದಿಲ್ಲ ಎಂದರು.

ಭಾರತ ಈಗ ಸೆಮಿಕಂಡಕ್ಟರ್ ವಲಯದಲ್ಲಿ ಕ್ರಾಂತಿಯ ಅಂಚಿನಲ್ಲಿದೆ. ಮಹತ್ವದ ಬೆಳವಣಿಗೆಗಳು ಉದ್ಯಮದ ರೂಪಾಂತರಣ ಮಾಡಲಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು. (4ನೇ ಪುಟಕ್ಕೆ)



**ಯಾವುದೇ ಬಿಕ್ಕಟ್ಟು ಬಂದರೂ ಉತ್ಪಾದನೆ ನಿರಂತರವಾಗಿರುವ ವ್ಯವಸ್ಥೆ ರೂಪಿಸುವುದೇ ನಮ್ಮ ಗುರಿ**

# ಇಬ್ಬರು ನಕಲಿ ವೈದ್ಯರಿಗೆ ತಲಾ ಲಕ್ಷ ರೂ.ಗಳ ದಂಡ





ದಾವಣಗೆರೆ, ಸೆ.11- ಹೊನ್ನಾಳಿ ತಾಲ್ಲೂಕು ಕ್ಯಾಸಿನಕೆರೆ ನಕಲಿ ವೈದ್ಯ ಹಾಗೂ ಲಿಂಗಾಪುರದಲ್ಲಿ ಫಾರ್ಮಾಸಿಸ್ಟ್ ನಡೆಸುತ್ತಿದ್ದ ಕ್ಲಿನಿಕ್ ಮುಚ್ಚಿಸಿ ತಲಾ 1 ಲಕ್ಷ ರೂ.ಗಳ ದಂಡ ಪಾವತಿಸುವಂತೆ ಜಿಲ್ಲಾಧಿಕಾರಿ ಹಾಗೂ ಕೆಪಿಎಂಇ ನೋಂದಣಿ ಪ್ರಾಧಿಕಾರ ಹಾಗೂ ಸಾರ್ವಜನಿಕ ಕುಂದುಕೊರತೆ ನಿವಾರಣಾ ಸಮಿತಿ ಅಧ್ಯಕ್ಷರಾದ ಜಿ.ಎಂ. ಗಂಗಾಧರ ಆದೇಶಿಸಿದ್ದಾರೆ.

ಭದ್ರಾವತಿ ತಾಲ್ಲೂಕಿನ ಸನ್ಯಾಸಿಕೋಡಮಗ್ಗಿ ಗ್ರಾಮದ 57 ವರ್ಷದ ಶ್ರೀನಿವಾಸ್ ತಂದೆ ತಿಮ್ಮಪ್ಪ ಇವರು, ಹೊನ್ನಾಳಿ ತಾಲ್ಲೂಕಿನ ಲಿಂಗಾಪುರದಲ್ಲಿ ಶೀನಪ್ಪಗೌಡ ಎಂಬುವರ ಮನೆ ಬಾಡಿಗೆ ಪಡೆದು ಹಲವು ವರ್ಷಗಳಿಂದ ಶ್ರೀ ರಾಮಾಂಜನೇಯ ಮೆಡಿಕಲ್ಸ್ ಮತ್ತು ಜನರಲ್ ಸ್ಟೋರ್ ಎಂದು ಪರವಾನಗಿ ಪಡೆದು, ಜೊತೆಗೆ ಅನಧಿಕೃತವಾಗಿ ಕ್ಲಿನಿಕ್ ನಡೆಸುತ್ತಾ ಜನರಿಗೆ ಚಿಕಿತ್ಸೆ ನೀಡುತ್ತಿದ್ದರು. ಇವರು ಪಡೆದ ಮೆಡಿಕಲ್ ಸ್ಟೋರ್ ಲೈಸೆನ್ಸ್ ರದ್ದುಪಡಿಸಿ ಒಂದು ಲಕ್ಷ ದಂಡ (4ನೇ ಪುಟಕ್ಕೆ)

ಏಳನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ರೇಣುಕಾ ಪಿ.ಆರ್. ನಾಗರಾಜ್
ಮರಣ : 12-9-2017
ನೀವು ನಮ್ಮನ್ನಗಲಿ ಇಂದಿಗೆ 7 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ
ದುಃಖತಪ್ತರು : ಪತಿ : ಪಿ.ಆರ್. ನಾಗರಾಜ್‌ರಾವ್,
ಮಕ್ಕಳಾದ : ಪಿ.ಎನ್. ರಾಜೇಶ್ವರಿ, ಪಿ.ಎನ್. ತುಕಾರಾಮ್
ಪಿ.ಎನ್. ಕುಮಾರ್, ಪಿ.ಎನ್. ಶ್ರೀಧರ್
ಸೊಸೆಯಂದಿರು : ಮಹಾಲಕ್ಷ್ಮಿ, ಸೌಮ್ಯ, ಕವಿತಾ
ಮೊಮ್ಮಕ್ಕಳಾದ : ತರುಣ್, ತನುಶ್ರೀ, ಉಲ್ಲಾಸ್, ದಿವ್ಯಾ, ರಾಘವ, ವಿನಾಯಕ

|| ಶ್ರೀ ಗುರು ಸಿದ್ದರಾಮೇಶ್ವರ ಸ್ವಾಮಿ ಪ್ರಸನ್ನ ||
ಗುರು-ಲಿಂಗ-ಜಂಗಮಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ
ಶ್ರೀ ಎನ್.ಬಿ. ಸಿದ್ದರಾಮಯ್ಯ ಮತ್ತು ಕುಟುಂಬದವರು
ಮಾಡುವ ವಿಜ್ಞಾಪನೆಗಳು.
ದಿನಾಂಕ : 06.09.2024ನೇ ಶುಕ್ರವಾರ ಬೆಳಗ್ಗೆ 12.15ಕ್ಕೆ ನನ್ನ ಧರ್ಮಪತ್ನಿಯಾದ
ಶ್ರೀಮತಿ ಎ.ಎಸ್. ಶೋಭಾ ಸಿದ್ದರಾಮಯ್ಯ
ಇವರು ಲಿಂಗೈಕ್ಯರಾದ ಪ್ರಯುಕ್ತ, ಲಿಂಗೈಕ್ಯರ ಆತ್ಮಶಾಂತಿಗಾಗಿ
"ಗುರು-ಲಿಂಗ-ಜಂಗಮಾರಾಧನೆ"ಯನ್ನು
ದಿನಾಂಕ : 12.09.2024ನೇ ಗುರುವಾರ ಮಧ್ಯಾಹ್ನ 12.30ಕ್ಕೆ
ಡಾ. ಸದ್ಯೋಜಾತ ಸ್ವಾಮಿ ಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ಶಿವಾಚಾರ್ಯ ನಿಕೇತನ, ಹಿರೇಮಠ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀ ಎನ್.ಬಿ. ಸಿದ್ದರಾಮಯ್ಯ, ಡಾ|| ಎನ್.ಎಸ್. ಶರತ್, ಡಾ|| ಅರ್ಪಿತ
ಪುಟಾಣಿ : ಅನ್ವಿಕ, ಪುಟಾಣಿ ಜಾನ್ವಿಕ, ಮಠದ ದಿ|| ಶ್ರೀ ಎ.ಸಿ. ಶಂಕರಯ್ಯ ಕುಟುಂಬದವರು
ಹಾಗೂ ಬಂಧು-ಮಿತ್ರರು ಫೋ. : 9611116012, 9742913189
ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



# ಗೋಷ್ಠಿ, ಮೇಳಗಳ ಫಲಶೃತಿ ಸಾರ್ವಜನಿಕರಿಗೆ ಲಭಿಸಲಿ



**ಶರಣ ಸಂಸ್ಕೃತಿ ಉತ್ಸವದ ಪೂರ್ವಭಾವಿ ಸಭೆಯಲ್ಲಿ ಡಾ.ಬಸವಕುಮಾರ ಶ್ರೀ ಅಭಿಮತ**

ಚಿತ್ರದುರ್ಗ, ಸೆ.11- ಶರಣ ಸಂಸ್ಕೃತಿ ಉತ್ಸವದಲ್ಲಿ ನಡೆಯುವ ವಿವಿಧ ಗೋಷ್ಠಿಗಳು ಹಾಗೂ ಮೇಳಗಳ ಫಲಶೃತಿ ಸಾರ್ವಜನಿಕರಿಗೆ ಸ್ವಲ್ಪವಾದರೂ ತಟ್ಟಬೇಕು ಎಂದು ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಶ್ರೀ ಬಸವಕುಮಾರ ಸ್ವಾಮೀಜಿ ಹೇಳಿದರು.

ಇಲ್ಲಿನ ಮುರುಘಾ ಮಠದ ಆವರಣದಲ್ಲಿ ಶರಣ ಸಂಸ್ಕೃತಿ ಉತ್ಸವದ ಅಂಗವಾಗಿ ಈಚೆಗೆ ನಡೆದ ಕೃಷಿ ಮೇಳದ ಪೂರ್ವಭಾವಿ ಸಭೆಯಲ್ಲಿ ಶ್ರೀಗಳು ಮಾತನಾಡಿದರು.

ಚಿತ್ರದುರ್ಗದ ಮುರುಘಾಮಠವು ತನ್ನ ಪರಿಧಿಯೊಳಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಸಾರ್ವಜನಿಕ ಹಿತಕ್ಕೋಸ್ಕರ ಶ್ರಮಿಸುತ್ತಿದ್ದು, ಶರಣ ಸಂಸ್ಕೃತಿ ಉತ್ಸವವು ಬರುವ ಅಕ್ಟೋಬರ್ 5ರಿಂದ 13ರ ವರೆಗೆ ನಡೆಯಲಿದೆ. ಅದರಲ್ಲಿ ನಡೆಯುವ ಮೇಳಗಳು ಎಲ್ಲರ ಗಮನ ಸೆಳೆಯುವ ನಿಟ್ಟಿನಲ್ಲಿ ಜರುಗಬೇಕು ಎಂದು ಹೇಳಿದರು.

ಕೃಷಿ, ತೋಟಗಾರಿಕೆ, ಕೈಗಾರಿಕೆಗೆ ಸಂಬಂಧ ಪಟ್ಟ ಸರ್ಕಾರಿ ಮತ್ತು ಖಾಸಗಿ ಇಲಾಖೆಯ ಅಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ ಅಭಿಪ್ರಾಯ ಸಂಗ್ರಹಿಸಿದ ಶ್ರೀಗಳು, ಪೀಠ ಪರಂಪರೆಯ ಎಲ್ಲ ಶ್ರೀಗಳೂ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಹಾಗಾಗಿ ಈ ಪದ್ಧತಿ ಉಳಿಸುವ ಸಲುವಾಗಿ ಕೃಷಿ, ತೋಟಗಾರಿಕೆ ಮತ್ತು ಕೈಗಾರಿಕಾ ಮೇಳ ಯಶಸ್ವಿಗೊಳಿಸೋಣ ಎಂದು ಮನವಿ ಮಾಡಿದರು.

ಮೇಳದಲ್ಲಿ ತೋಟಗಾರಿಕೆ ಬೆಳೆಗಾರರಿಗೆ ಅವಶ್ಯವಿರುವ ಸಾಮಾನುಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡಲಿದ್ದೇವೆ ಎಂದು ವರ್ಷಾ ಏಜೆನ್ಸೀಸ್‌ನ ರಂಗಸ್ವಾಮಿ ತಿಳಿಸಿದರು.

ಎಸ್‌ಜೆಎಂ ಮುರುಘರಾಜೇಂದ್ರ ತಾಂತ್ರಿಕ ಮಹಾವಿದ್ಯಾಲಯದ ಬಯೋಡೀಸೇಲ್ ವಿಭಾಗದ ಮುಖ್ಯಸ್ಥ ಜ್ಞಾನಾನಂದ ಮಾತನಾಡಿ, ಕಾಲೇಜಿನಲ್ಲಿ ಬಯೋಡೀಸೆಲ್ ಉತ್ಪಾದನಾ ಘಟಕವಿದ್ದು, ಅದರಿಂದಲೇ ಕಾಲೇಜಿನ ಅನೇಕ ಬಸ್ಸುಗಳು ಓಡುತ್ತಿವೆ. ಅದರ ಪ್ರಾತ್ಯಕ್ಷಿಕೆಯನ್ನು ವಸ್ತು ಪ್ರದರ್ಶನದಲ್ಲಿ ಇಡುವ ಬಗ್ಗೆ ಮಾತನಾಡಿದರು.

ಪಶು ಪಾಲನೆ ಇಲಾಖೆಯ ಅಧಿಕಾರಿ ಡಾ. ಮುರುಘೇಶ್, ಆಯುಷ್ ಇಲಾಖೆಯ ಡಾ. ಶಿವಕುಮಾರ್, ಮೌನೇಶ್ ಪತ್ತಾರ್, ಧರ್ಮಸ್ಥಳ ಸ್ವಸಹಾಯ ಸಂಘದ ವ್ಯವಸ್ಥಾಪಕಿ ಮಂಜುಳಾ, ಪ್ರಭುಶಂಕರ್, ಸಂಘಟಕ ಪಿ. ವೀರೇಂದ್ರ ಕುಮಾರ್, ಅಪ್ಪರ್ ಭದ್ರಾ, ರೇಷ್ಮೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ದಾನ, ಧರ್ಮ, ಪುಣ್ಯದ ಕೆಲಸಗಳಿಂದ ಮಾತ್ರ ರಕ್ಷಣೆ

## ಸಿದ್ಧಾರೂಢರ ಪುರಾಣ ಮಂಗಲೋತ್ಸವದಲ್ಲಿ ಶ್ರೀ ಯೋಗಾನಂದ ಸ್ವಾಮೀಜಿ ಅಭಿಮತ



ಮಲೇಬೆನ್ನೂರು, ಸೆ.11- ದಾನ, ಧರ್ಮ, ಪುಣ್ಯದ ಕೆಲಸಗಳನ್ನು ಮಾಡಿದಾಗ ನಮಗೆ ರಕ್ಷಣೆ ಸಿಗುತ್ತದೆ. ಪರೋಪಕಾರವೇ ನಮ್ಮನ್ನು ಕಾಪಾಡುತ್ತದೆ ಎಂದು ಯಲವಟ್ಟಿಯ ಶ್ರೀ ಯೋಗಾನಂದ ಸ್ವಾಮೀಜಿ ಹೇಳಿದರು.

ಇಲ್ಲಿಗೆ ಸಮೀಪದ ಯಲವಟ್ಟಿ ಗ್ರಾಮದಲ್ಲಿರುವ ಶ್ರೀ ಗುರು ಸಿದ್ಧಾಶ್ರಮದಲ್ಲಿ ಶ್ರಾವಣ ಮಾಸದ ಬೆನಕನ ಅಮಾವಾಸ್ಯೆ ಮತ್ತು ಶ್ರೀ ಸದ್ಗುರು ಸಿದ್ಧಾರೂಢರ ಕಥಾಮೃತ ಮುಕ್ತಾಯ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮಾನವ ಜನ್ಮ ಅರಿವಿನ ಜೀವವಾಗಿದೆ. ಮಾನವನ ಜೀವನ ಸಾರ್ಥಕವಾಗಬೇಕಾದರೆ ಇದ್ದುದರಲ್ಲಿ ಸ್ವಲ್ಪ ದಾನ, ಧರ್ಮದ ಕಾರ್ಯಗಳನ್ನು ಮಾಡಿದರೆ ಉತ್ತಮ ಮನಸ್ಸು, ಆರೋಗ್ಯದಿಂದಿರಲು ಸಾಧ್ಯ ಎಂದರು. ಜೀವನದಲ್ಲಿ ಪ್ರತಿಯೊಬ್ಬರೂ ಸಿದ್ಧಾರೂಢರ ಪುರಾಣ ಕೇಳಿ ಜೀವನ ಸಾರ್ಥಕ ಪಡಿಸಿಕೊಳ್ಳಿ ಎಂದು ಯೋಗಾನಂದ ಸ್ವಾಮೀಜಿ ತಿಳಿಸಿದರು.

ಹೋತನಹಳ್ಳಿಯ ಸಿದ್ಧಾಶ್ರಮದ ಶ್ರೀ ಶಂಕರಾನಂದ ಸ್ವಾಮೀಜಿ ಮಾತನಾಡಿ, ಯಾವುದೇ ಕೆಲಸವನ್ನು ಪ್ರೀತಿ, ವಿಶ್ವಾಸದಿಂದ ಮಾಡಬೇಕು. ಗುರುವಿನಲ್ಲಿ, ದೇವರಲ್ಲಿ ಭಕ್ತಿ ಇರಬೇಕು. ಏನೇ ಪಡೆದಿದ್ದರು ಗುರುವಿನ, ದೇವರ ಯೋಗ ಇರುತ್ತದೆ. ನಾವು ಅಂದುಕೊಂಡಂತೆ ಯಾವುದೂ ನಡೆಯುವುದಿಲ್ಲ ಮತ್ತು ಈಡೇರುವುದಿಲ್ಲ. ಅದು ಭಗವಂತನ ಅನುಗ್ರಹದಿಂದ ಮಾತ್ರ ಸಾಧ್ಯ. ಬದುಕಿಸುವುದು ಬೆಳೆಸುವುದು ಎಲ್ಲಾ ದೇವರ ಮಹಿಮೆಯಿಂದ ಸಾಧ್ಯ ಎಂದರು.

ಹೊಳೆಸಿರಿಗೆರೆಯ ಆಧ್ಯಾತ್ಮಿಕ ಚಿಂತಕ ಡಿ. ಸಿದ್ದೇಶ್ ಮಾತನಾಡಿ, ಸತ್ಸಂಗ ಮಾಡಿದಾಗ ಮುಕ್ತಿ ಸಿಗುತ್ತದೆ. ಗುರುಗಳ ಮಾರ್ಗದರ್ಶನ ಇದ್ದಾಗ ತೃಪ್ತಿ ಲಭಿಸುತ್ತದೆ. ಕಾಲ ಇದ್ದಂಗೆ ಇದೆ. ಆದರೆ ಮನುಷ್ಯನ ಆಚಾರ ವಿಚಾರಗಳು ಬದಲಾಗಿವೆ. ಮನಸ್ಸು ಶಾಂತಿ, ನೆಮ್ಮದಿ ಇಲ್ಲದಂತಾಗಿದೆ. ಶಾಂತಿ, ಸಮಾಧಾನ, ತಾಳ್ಮೆ ಇವುಗಳನ್ನು ಸಂಪಾದಿಸಿಕೊಳ್ಳಲು ಸತ್ಸಂಗದಂತಹ ಕಾರ್ಯಕ್ರಮಗಳು ಅತ್ಯವಶ್ಯಕ ವಾಗಿವೆ. ಮನುಷ್ಯ ತನ್ನ ಅಹಂಕಾರವನ್ನು ದೂರ ಮಾಡಿದಾಗ ಸಂತೃಪ್ತಿ ಸಿಗುತ್ತದೆ. ನಿರಂತರವಾಗಿ ಒಳ್ಳೆಯ ವಿಚಾರಗಳನ್ನು ಮಾಡಿದಾಗ ಮಾತ್ರ ಮನುಷ್ಯ ಉತ್ತಮನಾಗಿರಲು ಸಾಧ್ಯ ಎಂದರು.

ಹೊಳೆಸಿರಿಗೆರೆ ಗ್ರಾಮದ ಮಾಗೋಡ ರೇವಣಸಿದ್ದಪ್ಪ ಅವರು ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಿದ್ದರು. ಪಿ.ಎಲ್.ಡಿ ಬ್ಯಾಂಕ್ ನಿರ್ದೇಶಕ ಜಿ.ಆಂಜನೇಯ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ನಂದಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಬಿ. ವೀರಯ್ಯ, ಜಿಗಳಿ ಇಂದೂಧರ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ವಕೀಲ ನಂದಿತಾವರೆ ತಿಮ್ಮನಗೌಡ, ಕಾರಿಗನೂರು ಜಯದೇವಪ್ಪ, ಹಾರೆಗೊಪ್ಪದ ಫುಡ್ ಇನ್‌ಸ್ಪೆಕ್ಟರ್ ಶ್ರೀಧರ್, ನಿವೃತ್ತ ಶಿಕ್ಷಕರಾದ ಜಿ. ಬಸಪ್ಪ ಮೇಸ್ಟ್ರು, ಜಿಗಳಿಯ ಡಿ. ರವೀಂದ್ರಪ್ಪ, ಜಿ.ಆರ್.ನಾಗರಾಜ್, ಕೆ.ಎನ್.ಹಳ್ಳಿಯ ತಿಪ್ಪೇಶಪ್ಪ, ಜಿಗಳಿ ಪಿಎಸಿಎಸ್ ಸಿಇಓ ಎನ್.ಎನ್.ತಳವಾರ್, ಬಿ.ಸೋಮಶೇಖರ ಚಾರಿ, ಕುಂಬಳೂರು ವಾಸು, ಸದಾಶಿವ, ಹೊಳೆಸಿರಿಗೆರೆಯ ಐಗೂರು ಕರಿಬಸಪ್ಪ, ಮಾಳಗಿ ಮಲ್ಲೇಶಪ್ಪ, ಮಾಳಗಿ ಪರಮೇಶ್ವರಪ್ಪ, ಕೆ ಕೊಟ್ರಪ್ಪ, ಮಲ್ಲಾಡದ ಕೃಷ್ಣಪ್ಪ, ಯಲವಟ್ಟಿಯ ಹೊಸಮನಿ ಮಲ್ಲಪ್ಪ, ಕೆ ಮಂಜಪ್ಪ, ಹೊರಟ್ಟಿ ಕರಿಬಸಪ್ಪ, ಡಿ ರಾಜಪ್ಪ, ವೈ ಸುರೇಶ್ ಶೆಟ್ಟಿ, ಎ ಜಗದೀಶ್, ಆನಂದನಾಯ್ಕ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕುಂಬಳೂರಿನ ಕೆ. ಕುಬೇರಪ್ಪ ಭಕ್ತಿ ಗೀತೆ ಹಾಡಿದರು. ಯಲವಟ್ಟಿ ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿದರು.



## ರಾಣೇಬೆನ್ನೂರು : ಆನೆ ಮೇಲೆ ವೀರಭದ್ರಸ್ವಾಮಿ ಪಲ್ಲಕ್ಕಿ ಉತ್ಸವ

ರಾಣೇಬೆನ್ನೂರು, ಸೆ. 11 - ಇಲ್ಲಿನ ವಾಗೀಶ ನಗರದ ವೀರಭದ್ರಸ್ವಾಮಿ ಜಯಂತ್ಯೋತ್ಸವದ ಪ್ರಯುಕ್ತ ಬಸ್ ಸ್ಟ್ಯಾಂಡ್ ರಸ್ತೆಯ ಈಶ್ವರ ದೇವಸ್ಥಾನದಿಂದ ಸ್ವಾಮಿಯ ಮೂರ್ತಿಯ ಪಲ್ಲಕ್ಕಿ ಉತ್ಸವ ಐರಣಿ ಹೊಳೆ ಮಠದ ಆನೆ ಶ್ರೀಗೌರಿ ಮೇಲೆ ಅತ್ಯಂತ ಸಡಗರ ಸಂಭ್ರಮದೊಂದಿಗೆ ನಡೆಸಲಾಯಿತು. ಕಮಿಟಿಯ ಭಕ್ತರಾದ ಬಸವರಾಜ ಪಟ್ಟಣ ಶೆಟ್ಟಿ, ಜಿ.ಜಿ. ಹೊಟ್ಟಿಗೌಡ್ರ, ಬಾಬು ಐರಣಿ ಶೆಟ್ರು, ಮಾಜಿ ಶಾಸಕ ಅರುಣಕುಮಾರ ಪೂಜಾರ, ಪುಟ್ಟು ಅಂಗಡಿ, ಪಿಎಸ್ಐ ಗಡ್ಡೆಪ್ಪ ಗುಂಜಟಗಿ, ನಾಗರಾಜ ಪಟ್ಟಣ ಶೆಟ್ಟಿ, ನಾಗರಾಜ ಮೋಟಗಿ, ವೀರೇಶ ಮೋಟಗಿ ಭಾಗವಹಿಸಿದ್ದರು. ಕೊನೆಯಲ್ಲಿ ಹೊನ್ನಾಳಿ ಹಿರೇಕಲ್ಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯದಲ್ಲಿ ಧರ್ಮಸಭೆ ನಡೆಯಿತು.

## ಜಿಗಳಿಯಲ್ಲಿಂದು ಪ್ರತಿಭಾ ಕಾರಂಜಿ

ಜಿಗಳಿ ಗ್ರಾಮದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಗ್ಗೆ 9-30 ಕ್ಕೆ ಕುಂಬಳೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಭಾರಿ ಮುಖ್ಯ ಶಿಕ್ಷಕ ಲಿಂಗರಾಜ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಉದ್ಯೋಗ ಮೇಳ

ಶಿಶಿಕ್ಷು ತರಬೇತಿ ಸಂಸ್ಥೆ, ಚೆನ್ನೈ (ದಕ್ಷಿಣ ವಲಯ) ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ಬಾಪೂಜಿ ಪಾಲಿಟೆಕ್ನಿಕ್‌ನಲ್ಲಿ ಇಂದು ಬೆಳಗ್ಗೆ 9.30ಕ್ಕೆ ನೇರ ಸಂದರ್ಶನದಲ್ಲಿ ಅಪ್ರೆಂಟಿಶಿಪ್ ಮೇಳ ಹಾಗೂ ಉದ್ಯೋಗ ಮೇಳ ನಡೆಯಲಿದೆ.

ಸರ್ಕಾರಿ ಕಂಪನಿಗಳು ಮತ್ತು ಬಹು ರಾಷ್ಟ್ರೀಯ ಕಂಪನಿಗಳು ಈ ಮೇಳದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆದ್ದರಿಂದ 2020, 2021, 2022, 2023 ಮತ್ತು 2024 ಸಾಲಿನಲ್ಲಿ ತೇರ್ಗಡೆ ಹೊಂದಿದ ಯಾವುದೇ ವಿಭಾಗದ (ಟೆಕ್ನಿಕಲ್ ಅಂಡ್ ನಾನ್ ಟೆಕ್ನಿಕಲ್) ಇಂಜಿನಿಯರಿಂಗ್ ಮತ್ತು ಡಿಪ್ಲೋಮಾ ಅಭ್ಯರ್ಥಿಗಳು ಹಾಗೂ ಬಿಎ, ಬಿ.ಎಸ್ಸಿ ಬಿಕಾಂ, ಬಿಬಿಎ ಮತ್ತು ಬಿಸಿಎ ಪದವಿ ಪಡೆದ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ವೆಬ್ಸೈಟ್: www.boat-srp.com-Home page -News & Events section..

ವೀಕ್ಷಿಸಬಹುದು. ದೂ.ಸಂ: 9945251906, 9916013954 ಸಂಪರ್ಕಿಸಬಹುದು. NATS Portal (https://nats.education.gov.in & Google Form Link: (https://forms.gle/jkCKDErejAWsqbt69)) ನ್ಯಾಟ್ಸ್ ಪೋರ್ಟಲ್, ಗೂಗಲ್ ಫಾರಂ ಲಿಂಕ್ ಅನ್ನು ಬಳಸಿ ನೋಂದಾಯಿಸಿ ಪ್ರಿಂಟ್ ಕಾಫಿಯನ್ನು ಕಡ್ಡಾಯವಾಗಿ ತರಬೇಕು ಎಂದು ಕಾಲೇಜಿನ ಪ್ರಾಂಶುಪಾಲರಾದ ಪುಷ್ಪಾಲತಾ ನಾಡಿಗ್ ತಿಳಿಸಿದ್ದಾರೆ.

## ಗೌರಿ - ಗಣೇಶನ ಹಾಡುಗಳಿಂದ ಕೋಲಾಟ



ದಾವಣಗೆರೆ, ಸೆ. 11 - ಇಲ್ಲಿನ ವಿದ್ಯಾನಗರದ ಶ್ರೀ ಈಶ್ವರ ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಗೌರಿ - ಗಣೇಶ ಹಬ್ಬದ ಪ್ರಯುಕ್ತ ದೇವಸ್ಥಾನದ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ಶ್ರೀ ಈಶ್ವರ, ಪಾರ್ವತಿ, ಗಣಪತಿ ಮಹಿಳಾ ಭಜನಾ ಮಂಡಳಿಯವರಿಂದ ಐದು ದಿನಗಳ ಕಾಲ ಗೌರಿ ಗಣೇಶನ ಹಾಡುಗಳಿಂದ ಕೋಲಾಟದ ನೃತ್ಯವನ್ನು ನಡೆಸಿದರು.

## ನಗರದ ಡಿಆರ್‌ಆರ್ ಶಾಲೆಯಲ್ಲಿ ಇಂದು ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧೆ

ಡಿಆರ್‌ಆರ್ ವಿದ್ಯಾ ಸಂಸ್ಥೆಯಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ವಿದ್ಯಾ ಸಂಸ್ಥೆಯ ಸಂಸ್ಥಾಪಕ ದಿ. ಆರ್.ಆರ್. ಶ್ರೀನಿವಾಸ್ ಮೂರ್ತಿ ಅವರ ಸ್ಮರಣಾರ್ಥ ನಗರ ಮಟ್ಟದ ಸಾಹಿತ್ಯ, ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸಂಸ್ಥೆಯ ಅಧ್ಯಕ್ಷ ಆರ್.ಆರ್. ಶ್ರೀನಿವಾಸ್ ಮೂರ್ತಿ ಅಧ್ಯಕ್ಷತೆಯಲ್ಲಿ ನಡೆಯುವ ಬೆಳಗಿನ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಉದ್ಘಾಟಿಸುವರು. ಸಂಸ್ಥೆಯ ಆಡಳಿತಾಧಿಕಾರಿ ಎಂ. ಬಸವರಾಜಪ್ಪ ಪ್ರಾಸ್ತಾವಿಕ ನುಡಿಯಾಡುವರು. ಸಂಜೆ 4ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಡಾ. ಅನಿತಾ ದೊಡ್ಡ ಗೌಡರ್ ಸಮಾರೋಪ ಭಾಷಣ ಮಾಡುವರು.

## ಸಂಗೊಳ್ಳಿ ರಾಯಣ್ಣ ಜಯಂತಿಯಲ್ಲಿ ದೂಡಾ ನಿವೃತ್ತ ಅಭಿಯಂತರರಿಗೆ ಸನ್ಮಾನ





ದಾವಣಗೆರೆ, ಸೆ.11- ದಾಸಶ್ರೇಷ್ಠ ಶ್ರೀಕನಕದಾಸರು ಹಾಗೂ ಕ್ರಾಂತಿವೀರ ಶ್ರೀ ಸಂಗೊಳ್ಳಿ ರಾಯಣ್ಣ ಜಿಲ್ಲಾ ಹೋರಾಟ ಸಮಿತಿ ಇವರಿಂದ ನಗರದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಕಳೆದ ವಾರ ನಡೆದ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನವರ 227 ನೇ ಜಯಂತ್ಯೋತ್ಸವದ ಪ್ರಯುಕ್ತ ರಾಯಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ಸಮಿತಿಯ ಅಧ್ಯಕ್ಷ ಪಿ.ಜಿ.ರಮೇಶ್ ಅವರು 78 ನೇ ಸ್ವಾತಂತ್ರ್ಯ ದಿನಾಚರಣೆಯ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ಸಂಗೊಳ್ಳಿ ರಾಯಣ್ಣ ಪುತ್ಥಳಿ ಮತ್ತು ವೃತ್ತವನ್ನು ಅಚ್ಚುಕಟ್ಟಾಗಿ ನಿರ್ಮಿಸಿದ ದೂಡಾ ನಿವೃತ್ತ ಸಹಾಯಕ ನಿರ್ದೇಶಕ ಬಿ. ರೇಣುಕಾ ಪ್ರಸಾದ್ ಮತ್ತು ದೂಡಾ ನಿವೃತ್ತ ಅಭಿಯಂತರ ಕೆ.ಹೆಚ್. ಶ್ರೀಕರ್ ಅವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮಹಾನಗರ ಪಾಲಿಕೆಯ ವಿಪಕ್ಷ ನಾಯಕ ಕೆ. ಪ್ರಸನ್ನ ಕುಮಾರ್, ಮುಖಂಡ ಎಸ್.ಎಲ್. ಅನಂದಪ್ಪ ಮಾತನಾಡಿದರು. ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮತ್ತು ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ಮಾಸ್ಟರ್ ಶಿವಣ್ಣ, ಟಿ.ಎಸ್. ಉಮೇಶ್, ಕರಿಬಸಪ್ಪ ಕಸವಾಳ, ಸಲ್ಲಳ್ಳಿ ಮಂಜಣ್ಣ, ರಮೇಶ್, ಗುರುನಾಥ, ಚಲುವಪ್ಪ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಅಡಾಣೆ ಸಿದ್ದಪ್ಪ ನಿರೂಪಿಸಿದರು.

## ರಾಹುಲ್ ಹೇಳಿಕೆ : ಬಿಜೆಪಿ ಸಿಖ್ ವಿಭಾಗದ ಪ್ರತಿಭಟನೆ

ನವದೆಹಲಿ, ಸೆ. 11 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಿಖ್ ಸಮುದಾಯದ ಕುರಿತು ನೀಡಿದ ಹೇಳಿಕೆಯನ್ನು ವಿರೋಧಿಸಿ ದೆಹಲಿ ಬಿಜೆಪಿಯ ಸಿಖ್ ವಿಭಾಗದ ಸದಸ್ಯರು ಪ್ರತಿಭಟನೆ ನಡೆಸಿದ್ದಾರೆ.

ರಾಹುಲ್ ಗಾಂಧಿ ಅವರ ನಿವಾಸವಾದ 10 ಜನಪಥ್‌ಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗಿತ್ತು. ಪೊಲೀಸರು ಅವರನ್ನು ತಡೆದಿದ್ದಾರೆ.

ಸಿಖ್ ಸಮುದಾಯದವರು ಭಾರತದಲ್ಲಿ ಪಗಡಿ ಹಾಗೂ ಕಡಗ ಧರಿಸಲು ಅವಕಾಶ ಇರಬೇಕು ಎಂದು ಹೋರಾಟ ನಡೆಸಲಾಗುತ್ತಿದೆ. ಅವರು ಗುರುದ್ವಾರಕ್ಕೆ ತೆರಳಲು ಅವಕಾಶ ಇರಬೇಕು ಎಂದು ಹೋರಾಟ ಮಾಡುತ್ತಿದ್ದೇವೆ ಎಂದು ರಾಹುಲ್ ಗಾಂಧಿ ಅಮೆರಿಕದಲ್ಲಿ ಹೇಳಿದ್ದರು. ರಾಹುಲ್ ಗಾಂಧಿ ಹೇಳಿಕೆಗೆ ಬಿಜೆಪಿ ತೀವ್ರವಾಗಿ ಆಕ್ಷೇಪಿಸಿತ್ತು.

# ಕಲಾವಿದರಿಗೆ ಹತ್ತು ಸಾವಿರ ಮಾಸಾಶನ ನೀಡಿ

## ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ತಾ. ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಒತ್ತಾಯ



**ಹರಪನಹಳ್ಳಿ**

ಹರಪನಹಳ್ಳಿ, ಸೆ.11- ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿ ಕಷ್ಟದ ಪರಿಸ್ಥಿತಿಯಲ್ಲಿರುವ ಕಲಾವಿದರಿಗೆ ಪ್ರತಿ ತಿಂಗಳು 10 ಸಾವಿರ ಮಾಸಾಶನವನ್ನು ಸರ್ಕಾರ ನೀಡಬೇಕು ಎಂದು ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ತಾಲ್ಲೂಕು ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಒತ್ತಾಯಿಸಿದರು.

ತಾಲ್ಲೂಕಿನ ನಂದಿಬೇವೂರು ಗ್ರಾಮದ ನಂದಿಬಸವೇಶ್ವರ ದೇವಸ್ಥಾನದಲ್ಲಿ ಜರುಗಿದ ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಡು-ನುಡಿಯ ಸೇವೆಗೆ ಸಂಬಂಧಿಸಿದಂತೆ ಗಣನೀಯ ಸೇವೆ ಸಲ್ಲಿಸಿದ ಕಲಾವಿದರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ಈ ಕೂಡಲೇ ಸರ್ಕಾರ ಕಷ್ಟದಲ್ಲಿರುವ ಕಲಾವಿದರಿಗೆ ಸಹಾಯ ಸಹಕಾರ ನೀಡಬೇಕು ಎಂದರು.

ರಾಜ್ಯ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ನಾಡು-ನುಡಿಗೆ ಗಣನೀಯ ಸೇವೆ ಸಲ್ಲಿಸಿ, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಲಾವಿದರಿಗೆ ಪ್ರತಿ ತಿಂಗಳು 2,000 ರೂ.ಗಳ ಮಾಸಾಶನವನ್ನು ನೀಡಲಾಗುತ್ತಿದ್ದು, ಇದರಿಂದ ಜೀವನ ನಡೆಸಲು ಸಾಧ್ಯವಿಲ್ಲ. ಅದ್ದರಿಂದ ಕನಿಷ್ಟ 10,000 ರೂ.ಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕಲ್ಯಾಣ ಕರ್ನಾಟಕ ಕಲಾವಿದರ ಸಂಘದ ಬಿ.ಪ್ರಭಾಕರ್, ಡಾ.ಹೆಚ್.ಷಡಕ್ಷರಪ್ಪ, ಕೂಲಹಳ್ಳಿ ಚಂದ್ರಪ್ಪ, ಉಜ್ಜಳ್ಳಿ ಮುನಿಯಪ್ಪ, ಬುಡೇನ್ ಸಾಹೆಬ್, ಎ.ಬಸವರಾಜ, ಪಾರಿ ಮಲ್ಲಿಕಾರ್ಜುನ, ಎ.ಸೋಮನಗೌಡ, ಬಿ. ಮಹೇಶ್ವರಪ್ಪ, ಕೆ.ನರಸಿಂಹಪ್ಪ, ವಿ.ಬಿ.ವೀರೇಶ, ಬಿ.ರೇವಣ್ಣ, ಕುಂ. ಬಸಪ್ಪ, ಸಿ.ಎಂ. ಪಂಚಾಕ್ಷರಯ್ಯ, ಜಯಪ್ಪ, ಹನುಮಂತಪ್ಪ ಜಿ. ಗೋಪಾಲ, ಎ.ರೇವಣ್ಣ ಸೇರಿದಂತೆ ಇತರರು ಇದ್ದರು.

## ಬಿಜೆಪಿ ಸದಸ್ಯರಾಗಿ ಚಂದ್ರಶೇಖರಪ್ಪ



ದಾವಣಗೆರೆ,ಸೆ.11- ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ|| ಶಿವಯೋಗಿ ಸ್ವಾಮಿ ಅವರು, ನಿವೃತ್ತ ಮುಖ್ಯ ಇಂಜಿನಿಯರ್ ಟಿ.ಎಂ. ಚಂದ್ರಶೇಖರಪ್ಪ ಅವರನ್ನು ಬಿಜೆಪಿ ಸದಸ್ಯರನ್ನಾಗಿ ಮಾಡಿದರು. ಇದು, ಬಿಜೆಪಿಗೆ ಗೌರವದ ವಿಚಾರವಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ತಿಳಿಸಿದ್ದಾರೆ.

## ವಿನೋಬನಗರದಲ್ಲಿ ಅನ್ನ ಸಂತರ್ಪಣೆ

ದಾವಣಗೆರೆ, ಸೆ. 11 - ಸ್ಥಳೀಯ ವಿನೋಬನಗರದ ಶ್ರೀ ವರಸಿದ್ಧಿ ವಿನಾಯಕ ಸೇವಾ ಸಮಿತಿಯಿಂದ 32ನೇ ವರ್ಷದ ಗಣೇಶೋತ್ಸವ ನಡೆಯುತ್ತಿದ್ದು, ಪ್ರತಿ ದಿನ ಸಂಜೆ 6.30ಕ್ಕೆ ವಿಶೇಷ ಪ್ರದರ್ಶನ ನೀಡಲಾಗುತ್ತಿದೆ.

ನಾಡಿದ್ದು ದಿನಾಂಕ 13ರ ಶುಕ್ರವಾರ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ಇದೇ ದಿನಾಂಕ 15ರ ಭಾನುವಾರ ಮಧ್ಯಾಹ್ನ 12ರಿಂದ ಶ್ರೀ ವಿನಾಯಕ ಮೂರ್ತಿಯನ್ನು ಮೆರವಣಿಗೆ ಮೂಲಕ ಬಾತಿ ಕೆರೆಯಲ್ಲಿ ವಿಸರ್ಜಿಸಲಾಗುವುದು.

## ಮನೆಗಳಿಗೆ ಹಾನಿ, ಧರ್ಮಸ್ಥಳ ನೆರವು



ಮಲೇಬೆನ್ನೂರು, ಸೆ. 11- ಕೊಮಾರನಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ಶ್ರೀಮತಿ ಶಿಲ್ಪಾ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ಇವರ ಮನೆಗಳಿಗೆ ಹಾನಿಯಾಗಿತ್ತು.

**ಕೊಮಾರನಹಳ್ಳಿ**

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಡಾ. ವೀರೇಂದ್ರ ಹೆಗ್ಗಡೆ ಅವರು ಮಂಜೂರು ಮಾಡಿದ 25 ಸಾವಿರ ರೂ.ಗಳ ಚೆಕ್ಕನ್ನು ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಜಿ. ಮಂಜುನಾಥ್ ಪಟೇಲ್, ಜಿಗಳಿ ಪ್ರಕಾಶ್ ಮತ್ತು ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಗ್ರಾ.ಪಂ. ಸದಸ್ಯ ಮಡಿವಾಳರ್ ಬಸವರಾಜ್ ಅವರು ಶಿಲ್ಪಾ ಮತ್ತು ಲಕ್ಷ್ಮೀ ಬಾಯಿ ಅವರಿಗೆ ವಿತರಿಸಿದರು.

ಗ್ರಾಮದ ಎಸ್.ಡಿ. ರಂಗನಾಥ್, ಹೋಟೆಲ್ ಪರಮೇಶ್ವರಪ್ಪ, ಕೆ. ಪರಮೇಶ್ವರಪ್ಪ, ಪಾರೇರ ರಂಗಪ್ಪ, ಮಲ್ಲನಾಯ್ಕನಹಳ್ಳಿ ವಲಯ ಮೇಲ್ವಿಚಾರಕಿ ರಕ್ಷಿತಾ, ಸೇವಾ ಪ್ರತಿನಿಧಿ ಶಿಲ್ಪಾ ಮತ್ತು ಅನುಷಾ ಈ ವೇಳೆ ಹಾಜರಿದ್ದರು.

### ಕುಣೆಬೆಳಕೆರೆಯ ಶಾಮನೂರು ಹನುಮಂತಪ್ಪ ನಿಧನ



ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ವಾಸಿ ಶಾಮನೂರು ಹನುಮಂತಪ್ಪ ಅವರು ದಿನಾಂಕ 11.09.2024ರ ಬುಧವಾರ ರಾತ್ರಿ 8.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.09.2024ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಕುಣೆಬೆಳಕೆರೆಯ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

### ವಿಠ್ಠಲ ಪಿ. ಹೊವಳೆ ನಿಧನ



ದಾವಣಗೆರೆ ಸಿಟಿ ಮೌನೇಶ್ವರ ಬಡಾವಣೆ ವಾಸಿ ಶ್ರೀ ವಿಠ್ಠಲ ಪಿ. ಹೊವಳೆ (ದೀಪಕ್ ಕ್ಲಾತ್ ಸೆಂಟರ್, ಇಸ್ಲಾಂ ಪೇಟೆ) (56) ಇವರು ದಿನಾಂಕ 11.9.2024ರ ಬುಧವಾರ ಬೆಳಿಗ್ಗೆ 10ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರರು, ಸಹೋದರಿಯರು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.09.2024ರ ರಾತ್ರಿ 8ಕ್ಕೆ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಿತು.

# ಪಾಕ್ ಗುಪ್ತಚರ ಸಂಸ್ಥೆ ಪರ ಶಾಸಕಿ ಭೇಟಿ ಮಾಡಿದ ರಾಹುಲ್ : ಬಿಜೆಪಿ ಟೀಕೆ

ನವದೆಹಲಿ, ಸೆ. 11 - ಪಾಕಿಸ್ತಾನದ ಗುಪ್ತಚರ ಸಂಸ್ಥೆಯಾದ ಐ.ಎಸ್.ಐ. ಹಾಗೂ ಮುಸ್ಲಿಂ ಬ್ರದರ್‌ಹುಡ್ ಸಂಘಟನೆಯ ಪರ ನಿಲುವು ಹೊಂದಿರುವ ಅಮೆರಿಕದ ಶಾಸಕಿ ಇಲ್ಹಾನ್ ಓಮರ್ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿ ಮಾಡಿದ್ದಾರೆ ಎಂದು ಬಿಜೆಪಿ ಆಕ್ಷೇಪಿಸಿದೆ.

ಭಾರತ ವಿರೋಧಿ ನಿಲುವುಗಳಿಗೆ ಹೆಸರಾಗಿರುವ ಜನರನ್ನು ರಾಹುಲ್ ಗಾಂಧಿ ವಿದೇಶದಲ್ಲಿ ಭೇಟಿ ಮಾಡುತ್ತಿರುವುದು ಅಪಾಯಕಾರಿ ಹಾಗೂ ಕುಚೇಷ್ಟೆಯ ಚಟುವಟಿಕೆ ಎಂದು ಬಿಜೆಪಿ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ, ರಾಹುಲ್ ಗಾಂಧಿ ಈ ಹಿಂದೆ ಹುಡುಗಾಟಿಕೆಯ ಚಟುವಟಿಕೆಗಳಲ್ಲಿ ತೊಡಗಿದ್ದರು. ಈಗ ಅಪಾಯಕಾರಿ ಹಾಗೂ ಕುಚೇಷ್ಟೆಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಟೀಕಿಸಿದರು.

ವಿರೋಧ ಪಕ್ಷದ ನಾಯಕರೊಬ್ಬರು ಘೋಷಿತ ಭಾರತ ವಿರೋಧಿ ಶಾಸಕಿ ಭೇಟಿ ಮಾಡಿರುವುದು ಹಾಗೂ ಶುಭಾಶಯ ವಿನಿಮಯ ಮಾಡಿಕೊಂಡಿರುವುದು ಇದೇ ಮೊದಲು. ಅಮೆರಿಕ ವಿರೋಧಿ ನಿಲುವು ಹಾಗೂ ಹೇಳಿಕೆಗಳಿಗೆ ಕುಖ್ಯಾತವಾಗಿರುವ ಇಲ್ಹಾನ್ ಓಮರ್ ಅವರನ್ನು ರಾಹುಲ್ ಗಾಂಧಿ ಭೇಟಿ ಮಾಡಿದ್ದಾರೆ ಎಂದು ತ್ರಿವೇದಿ ಹೇಳಿದರು. ಸಿಖ್ ಸಮುದಾಯದ ಕುರಿತು ರಾಹುಲ್ ಗಂಧಿ ನೀಡಿದ ಹೇಳಿಕೆಯನ್ನು ಪ್ರಸ್ತಾಪಿಸಿದ ತ್ರಿವೇದಿ, ಖಲಿಸ್ತಾನಿ ಪ್ರತ್ಯೇಕತಾವಾದಿ ಗುರಪಟ್ವಂತ್ ಸಿಂಗ್ ಪನ್ನುನ್ ಅವರಿಂದ ರಾಹುಲ್ ಬೆಂಬಲ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

# ಪ್ರಧಾನಿ ಸಮಾವೇಶದಲ್ಲಿನ ಸ್ಫೋಟ ಪ್ರಕರಣ ನಾಲ್ವರಿಗೆ ಮರಣ ದಂಡನೆ ಬದಲು ಜೈಲು

ಪಾಟ್ನ, ಸೆ. 11 - 2013ರಲ್ಲಿ ಪಾಟ್ನಾದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಡೆಸಿದ್ದ ಸಮಾವೇಶದಲ್ಲಿ ಸ್ಫೋಟಗಳನ್ನು ನಡೆಸಿದ್ದ ನಾಲ್ವರಿಗೆ ವಿಧಿಸಲಾಗಿದ್ದ ಮರಣ ದಂಡನೆಯನ್ನು ಪಾಟ್ನಾ ಹೈಕೋರ್ಟ್, 30 ವರ್ಷಗಳ ಜೈಲು ಶಿಕ್ಷೆಗೆ ಇಳಿಕೆ ಮಾಡಿದೆ.

ನ್ಯಾಯಮೂರ್ತಿಗಳಾದ ಅಶುತೋಶ್ ಕುಮಾರ್ ಹಾಗೂ ಜಿತೇಂದ್ರ ಕುಮಾರ್ ಅವರನ್ನು ಒಳಗೊಂಡ ಪೀಠ ಈ ತೀರ್ಪು ನೀಡಿದೆ.

2021ರಲ್ಲಿ ವಿಚಾರಣಾ ನ್ಯಾಯಾಲಯ ನಾಲ್ವರಿಗೆ ಮರಣ ದಂಡನೆ ವಿಧಿಸಿತ್ತು. ಇಬ್ಬರಿಗೆ ಜೀವಾವಧಿ, ಇಬ್ಬರಿಗೆ ಹತ್ತು ವರ್ಷಗಳ ಜೈಲು ಹಾಗೂ ಇನ್ನೊಬ್ಬ ಆರೋಪಿಗೆ ಏಳು ವರ್ಷದ ಜೈಲು ಶಿಕ್ಷೆ ವಿಧಿಸಲಾಗಿತ್ತು.

ಇಮ್ತಿಯಾಜ್ ಆಲಂ, ಹೈದರ್ ಅಲಿ, ನುಮನ್ ಅನ್ಸಾರಿ ಹಾಗೂ ಮುಜೀಬುಲ್ಲ ಅನ್ಸಾರಿಗೆ ವಿಧಿಸಲಾಗಿದ್ದ ಮರಣ ದಂಡನೆಯನ್ನು ಜೈಲು ಶಿಕ್ಷೆಗೆ ಇಳಿಕೆ ಮಾಡಲಾಗಿದೆ. ಆಲಂ, ಅಲಿ ಹಾಗೂ ಮುಜೀಬುಲ್ಲ ಅನ್ಸಾರಿ ಈ ಹಿಂದೆ 2013ರಲ್ಲಿ ಬೋಧ ಗಯಾದಲ್ಲಿ ಸರಣಿ ಸ್ಫೋಟ ನಡೆಸಿ ಜೀವಾವಧಿ ಶಿಕ್ಷೆಗೂ ಗುರಿಯಾಗಿದ್ದರು.

2013ರಲ್ಲಿ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿದ್ದ ಮೋದಿ ಪಾಲ್ಗೊಂಡಿದ್ದ ಸಮಾವೇಶದಲ್ಲಿ ಲಘು ತೀವ್ರತೆಯ ಸ್ಫೋಟಗಳನ್ನು ನಡೆಸಲಾಗಿತ್ತು.



# ಹಳೆ ಊರಲ್ಲಿನ ಹಳೆ ಕಾಲದ ಗಣೇಶೋತ್ಸವದ ಸ್ವಾರಸ್ಯಗಳು

**ಚತುರ್ಥಿಯಂದು ಸ್ಥಾಪಿಸಿದ ಗಣೇಶನನ್ನು ನೋಡಲು ಜನ ಹೋಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ.**

## 'ಕೀಲು ಕುದುರೆ ನೃತ್ಯ v/s ಬೀಡಿ ಡಾನ್ಸ್?!'

> ನಮ್ಮ ಬಾಲ್ಯದಲ್ಲಿ ಹಳೆ ದಾವಣಗೆರೆ ಭಾಗದಲ್ಲಿನ ಗಣೇಶೋತ್ಸವದ ಸ್ವಾರಸ್ಯ...
> - ಹೆಚ್.ಬಿ.ಮಂಜುನಾಥ, ಹಿರಿಯ ಪತ್ರಕರ್ತ

ಹಳೇ ದಾವಣಗೆರೆಯಲ್ಲಿ ಆ ಕಾಲದ ಗಣೇಶೋತ್ಸವದ ಮತ್ತೊಂದು ದೊಡ್ಡ ಆಕರ್ಷಣೆ ಎಂದರೆ ದೊಡ್ಡಪೇಟೆ ಗಣೇಶನ ವಿಸರ್ಜನಾ ಮೆರವಣಿಗೆಯಲ್ಲಿ 'ಕೀಲು ಕುದುರೆ ನೃತ್ಯ', ತಮಿಳುನಾಡಿನ ತಂಜಾವೂರಿನಿಂದ ಬರುತ್ತಿದ್ದ ಸುಂದರಮೂರ್ತಿ ಮತ್ತು ತಂಡದವರ ಕೀಲು ಕುದುರೆ ನೃತ್ಯ ಎಂದರೆ ಕೇವಲ ದಾವಣಗೆರೆಯವರಿಗಷ್ಟೇ ಅಲ್ಲ ಸುತ್ತಮುತ್ತಲಿನ ಊರಿನವರೆಲ್ಲಾ ಆ ದಿನ ಕೀಲು ಕುದುರೆ ನೃತ್ಯ ನೋಡಲಿಕ್ಕಾಗಿ ಅನೇಕ ಸಹಸ್ರ ಸಂಖ್ಯೆಯಲ್ಲಿ ದಾವಣಗೆರೆಗೆ ಬಂದು ಸೇರುತ್ತಿದ್ದರು.



ಸುಂದರಮೂರ್ತಿ, ಅವರ ಹೆಂಡತಿ, ಅವರ ಮಗ ಹಾಗೂ ಅನೇಕ ಕಲಾವಿದರ ದೊಡ್ಡ ತಂಡ ಅದು.

ಸುಂದರ ಮೂರ್ತಿ ದಂಪತಿ ರಾಜ ರಾಣಿಯರಂತೆಯೂ, ಈಶ್ವರ ಪಾರ್ವತಿಯರಂತೆಯೂ, ಮೀನಾಕ್ಷಿ ಸೌಂದರನಾಥರಂತೆಯೂ, ಶಿವಾಜಿ ಮಹಾರಾಜರಂತೆಯೂ ವಿವಿಧ ವೇಶಭೂಷಣಗಳಲ್ಲಿ ಮರಗಾಲು ಕಟ್ಟಿಕೊಂಡು ಕೀಲು ಕುದುರೆಯ ಮೇಲೆ ಮಾಡುವ ನೃತ್ಯ ಮನಮೋಹಕವಾಗಿರುತ್ತಿತ್ತು. ರಾಜ - ರಾಣಿಯರ ಪೋಷಾಕು, ಒಡವೆಗಳು, ಕುದುರೆಯ ಒಡವೆಗಳು, ಅಲಂಕಾರಗಳು ಮಂದ ಬೆಳಕಿನಲ್ಲೂ ಜಗಜಗ ಮಿಂಚುತ್ತಿದ್ದವು. ಕಣ್ಣು ಕುಕ್ಕುವಂತಿರುತ್ತಿದ್ದವು. ಜೊತೆಯಲ್ಲಿ ನವಿಲಿನ ವೇಷದವರು, ನಂದಿ ವೇಷದವರು, ತಮಾಷೆ ಮುಖವಾಡದವರು, ಕರಗ ರೀತಿಯ ಕುಂಭದ ಮೇಲೆ ರೆಕ್ಕೆ ಬಿಡಿಸಿದ ಹಕ್ಕಿಯ ಗೊಂಬೆ ಹೊತ್ತು ನರ್ತಿಸುವ ಸ್ತ್ರೀ ವೇಷದ ಪುರುಷರು, ಕಮಾನಿನ ಆಕಾರದ ಪುಷ್ಪಕಾವಡಿಯನ್ನು ಕುತ್ತಿಗೆ ಭುಜ ತಲೆಯ ಮೇಲೆಲ್ಲಾ ಸುತ್ತಿಸುತ್ತಾ ಕುಣಿಯುವವರು, ಪೂರಕವಾದ ನಾದಸ್ವರ ಮತ್ತು ಡೋಲಿನವರು ಗಂಧರ್ವ ಲೋಕವೇ ಬಂದಿದೆಯೇನೋ ಎನ್ನುವಂತೆ ಭಾಸವಾಗುತ್ತಿತ್ತು.

ನಾದಸ್ವರ ಮತ್ತು ಡೋಲಿನ ಶಬ್ದವಂತೂ ಕಿಲೋಮೀಟರುಗಟ್ಟಲೇ ದೂರಕ್ಕೂ ಕೇಳಿಸುವಷ್ಟು ಭಾರೀಯಾಗಿರುತ್ತಿತ್ತು. ಉತ್ಸವ ಪ್ರಾರಂಭವಾಗುವುದು ಸಂಜೆ 7 ಗಂಟೆಯ ನಂತರವಾದರೂ ಜನ ಸಂಜೆ 4 ರಿಂದಲೇ ಗಣೇಶನ ದೇವಸ್ಥಾನದ ಬಳಿ ಜಮಾಯಿಸುತ್ತಿದ್ದರು.

ಪ್ರಾರಂಭದಲ್ಲಿ ಗಣೇಶನ ದೇವಸ್ಥಾನದ ಬಳಿ ನೃತ್ಯ ಮಾಡಿದ ಕೀಲು ಕುದುರೆಯವರು ದೊಡ್ಡಪೇಟೆಯಿಂದ ಚೌಕಿಪೇಟೆಗೆ ಬಂದು ಶ್ರೀ ಬಕೇಶ್ವರ ದೇವಸ್ಥಾನದ ಕಣದಲ್ಲಿ ಕುಣಿಯುತ್ತಿದ್ದರು. ನಂತರದಲ್ಲಿ ಹಾಸಬಾವಿ ವೃತ್ತ ಅದಾದ ಮೇಲೆ ಚಾಮರಾಜಪೇಟೆ ವೃತ್ತ ನಂತರದಲ್ಲಿ ಲಕ್ಷ್ಮೀ ಸರ್ಕಲ್ ಅಲ್ಲಿಂದ ಮುಂದೆ ಕಾಯಿಪೇಟೆ ಬಸವೇಶ್ವರ ದೇವಸ್ಥಾನದ ಮುಂದೆ ಅದಾದ ಮೇಲೆ ಹೊಂಡದ ವೃತ್ತದಲ್ಲಿ ಕುಣಿಯುವಾಗ ಹೊಂಡದಲ್ಲಿ ಗಣಪತಿಯ ವಿಸರ್ಜನೆಯ ನೆರವೇರುತ್ತಿತ್ತು. ಆ ವೇಳೆಗಾಗಲೇ ಬೆಳಗಿನ ಜಾವಾಗಿರುತ್ತಿತ್ತು. ನಂತರ ಗಣಪತಿ ದೇವಸ್ಥಾನದ ಸ್ಥಾಪಕ ಪ್ರಮುಖರಲ್ಲಿ ಒಬ್ಬರಾದ ಅಣ್ಣೇಗೇರಿ ವಿಶ್ವನಾಥಪ್ಪನವರ ಮನೆಯ ಮುಂದೆ ಕೊನೆಯ ನೃತ್ಯವನ್ನು ಪ್ರದರ್ಶಿಸುತ್ತಿದ್ದರು. ಆಗ ಸಾಮಾನ್ಯವಾಗಿ ಬೆಳಗಿನ ಆರೂವರೆ ಗಂಟೆ ಆಗಿರುತ್ತಿತ್ತು. ಹಿಂದಿನ ಸಂಜೆಯಿಂದ ಮಾರನೇ ಬೆಳಗಿನವರೆಗೂ ಸಹಸ್ರಾರು ಜನ ಈ ಕೀಲು ಕುದುರೆ ನೃತ್ಯ ನೋಡಲು ತಂಡದ ಲಾರಿಗಳ ಹಿಂದೆ ಓಡುತ್ತಿದ್ದರು.

ಮುನಿಸಿಪಾಲಿಟಿಯ ಲಾರಿಗಳನ್ನು ಈ ಕೀಲುಕುದರೆ ನೃತ್ಯ ತಂಡದವರಿಗೆ ಒದಗಿಸಲಾಗುತ್ತಿತ್ತು. ಆ ಕಾಲದಲ್ಲೇ ಈ ಕೀಲು ಕುದುರೆ ನೃತ್ಯ ತಂಡಕ್ಕೆ ಸುಮಾರು 1,200 ರೂ ಗಳ ಸಂಭಾವನೆ ಕೊಡಲಾಗುತ್ತಿತ್ತು!. ಆ ಮೊತ್ತ ಈಗಿನ ಸುಮಾರು 6 ಲಕ್ಷ ರೂಪಾಯಿಗಳಿಗೆ ಸಮ ಎನ್ನಬಹುದು.

ಈ ಸಂದರ್ಭದಲ್ಲಿ ಬೀಡಿ ಕಂಪನಿಗಳ ಪ್ರಚಾರದ ವ್ಯಾನುಗಳು ವಿದ್ಯುತ್ ದೀಪ ಅಲಂಕಾರ ಮಾಡಿಕೊಂಡು ಪ್ರಚಾರಕ್ಕಾಗಿ ರಸ್ತೆಯಲ್ಲಿ ಓಡಾಡುತ್ತಿದ್ದವು. ಆ ವ್ಯಾನುಗಳ ಮೇಲೆ ಓರ್ವ ಮಾಡ್ರನ್ ಹೀರೋ ಡ್ರೆಸ್ಸಿನ ಯುವಕ, ಮತ್ತೋರ್ವ ಮಾಡ್ರನ್ ಲೇಡಿ ಡ್ರೆಸ್ಸಿನ ಯುವಕ ಪ್ರೇಮಿಗಳಂತೆ ನೃತ್ಯ ಮಾಡುತ್ತಿದ್ದರು. ಒಂದು ವರ್ಷ ಗಣೇಶೋತ್ಸವದಲ್ಲಿ ಕೆಲವು ಮಂದಿ ಪುರುಷರು ಕೀಲು ಕುದುರೆ ನೃತ್ಯ ನೋಡುವುದು ಬಿಟ್ಟು ಬೀಡಿ ನೃತ್ಯವನ್ನೇ ನೋಡುತ್ತಾ ಆ ವ್ಯಾನುಗಳ ಹಿಂದೆ ಓಡುತ್ತಿದ್ದರು?!. ಅವರಲ್ಲಿ ಅನೇಕರು ನನ್ನ ಪರಿಚಿತರೂ ಇದ್ದರು.

ಗಣೇಶೋತ್ಸವ ಮೆರವಣಿಗೆಯ ಮರುದಿನ ಚೌಕಿಪೇಟೆಯ ನಾವು ಕೆಲವು ಹುಡುಗರು ಶ್ರೀ ಬಕ್ಕೇಶ್ವರ ದೇವಸ್ಥಾನದ ಕಟ್ಟೆಯ ಮೇಲೆ ಹೀಗೇ ಮಾತಾಡುತ್ತಾ ಕುಳಿತಾಗ ಈ ವಿಷಯವೂ ಬಂದಿತು. ಅಂಥಾ ಕೀಲು ಕುದುರೆ ನೃತ್ಯ ನೋಡುವುದು ಬಿಟ್ಟು ಅವರೇಕೆ ಬೀಡಿ ಡ್ಯಾನ್ಸ್ ನೋಡಲು ವ್ಯಾನಿನ ಹಿಂದೆ ಓಡುತ್ತಿದ್ದರು ? ಎಂಬ ಪ್ರಶ್ನೆ ನಮ್ಮಲ್ಲಿ ಚರ್ಚೆಗೆ ಬಂತು. ನಮಗೆ ತೋಚಿದಂತೆ ಅಭಿಪ್ರಾಯ ಹೇಳುತ್ತಿದ್ದೆವು. ಅದೇ ವೇಳೆಗೆ ಮಹಾರಾಜ ಪೇಟೆ ಷಣ್ಮುಖಪ್ಪ ಅಲ್ಲಿಗೆ ಬಂದರು. 'ಏನ್ ಮಾತಾಡಾಕತ್ತೀರೋ ಹುಡ್ರಾ?' ಅಂತ ಕೇಳಿದರು. 'ಅಲ್ಲಾ.. ಅಂಥ ಕೀಲು ಕುದುರೆ ನೃತ್ಯ ನೋಡದು ಬಿಟ್ಟು ಬೀದಿ ಡ್ಯಾನ್ಸ್ ನೋಡಕ್ಕೆ ವ್ಯಾನ್ ಹಿಂದೆ ಓಡ್ತಿದ್ರಲ್ಲ, ಅದರಾಗೆ ಏನ್ ಅಟ್ರಾಕ್ಷನ್ನು ಅಂತ ಮಾತಾಡ್ತಿದ್ವಿ' ಎಂದೆವು. ಅದಕ್ಕವರು ನಗುತ್ತಾ ಹೇಳಿದರು 'ಲೇ ಹುಡ್ರಾ ಅವರೆಲ್ಲಾ ವ್ಯಾನ್ ಹಿಂದೆ ಓಡ್ತಾ ಇದ್ದದ್ದು ಡಾನ್ಸ್ ನೋಡಕ್ಕಲ್ಲ, ಸರ್ಕಲ್ ಗಳಾಗೆ ವ್ಯಾನ್ ನೋರು ಬೀಡಿ ತೂರ್ತಾರಂತೆ ಅಂತಾ ಯಾರೋ ಸುದ್ದಿ ಹಬ್ಸಿದ್ರು, ಬೀಡಿ ಆರುಸ್ಕಣಾಕೆ ಓಡ್ತಿದ್ರು ಕಣ್ರಲೇ' ಎಂದರು.

## ನಗರದ ಎ.ಆರ್.ಜಿ. ಕಾಲೇಜಿಗೆ ದ್ವಿತೀಯ ಬಹುಮಾನ



ದಾವಣಗೆರೆ, ಸೆ.11- 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಜಿಲ್ಲಾ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಪಥ ಸಂಚಲನದಲ್ಲಿ ಕಾಲೇಜು ಎನ್.ಸಿ.ಸಿ. ಕೆಡೆಟ್ ವಿಭಾಗದಿಂದ ಬಾಪೂಜಿ ವಿದ್ಯಾಸಂಸ್ಥೆಯ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜು ದ್ವಿತೀಯ ಸ್ಥಾನ ಪಡೆಯಿತು. ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

# ಜಿಲ್ಲೆಯಲ್ಲಿ ನಾಡಿದ್ದು ರಾಷ್ಟ್ರೀಯ ಲೋಕ್ ಅದಾಲತ್



ದಾವಣಗೆರೆ, ಸೆ. 11 – ಇದೇ ದಿನಾಂಕ 14ರ ಶನಿವಾರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಒಟ್ಟು 42,523 ಪ್ರಕರಣಗಳು ಬಾಕಿ ಇವೆ. ಇವುಗಳ ಪೈಕಿ 8,272 ಪ್ರಕರಣಗಳು ರಾಜಿಗೆ ಅರ್ಹ ಎಂದು ಗುರುತಿಸಲಾಗಿದೆ. ಈ ಬಾರಿ 8 ಸಾವಿರ ಪ್ರಕರಣಗಳನ್ನು ರಾಜೀ ಮಾಡುವ ಗುರಿ ಇದೆ ಎಂದು ಹೇಳಿದರು.

ಈ ಹಿಂದೆ ಜುಲೈ 13ರಂದು ಲೋಕ್ ಅದಾಲತ್ ನಡೆದಾಗ ಬಾಕಿ ಇದ್ದ 7,944 ಪ್ರಕರಣಗಳು ಹಾಗೂ 2,55,139 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಲಾಗಿತ್ತು ಎಂದವರು ಹೇಳಿದರು.

ಈಗಾಗಲೇ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಜೊತೆಗೆ, ವ್ಯಾಜ್ಯ ಪೂರ್ವ ಪ್ರಕರಣಗಳನ್ನೂ ರಾಜೀ ಸಂಧಾನಕ್ಕೆ ಒಳಪಡಿಸಲಾಗುವುದು. ಲೋಕ್ ಅದಾಲತ್‌ನಲ್ಲಿ ಕಡಿಮೆ ಖರ್ಚಿನಲ್ಲಿ ಪ್ರಕರಣಗಳು ಇತ್ಯರ್ಥವಾಗುವ ಜೊತೆಗೆ, ಕಕ್ಷಿದಾರರ ನಡುವಿನ ಬಾಂಧವ್ಯವೂ ಉಳಿಯುತ್ತದೆ ಎಂದು ನ್ಯಾಯಮೂರ್ತಿ ಹೇಳಿದರು.

ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂಸ್ವಾಧೀನ ಪರಿಹಾರ, ಬ್ಯಾಂಕ್ ಸಾಲ, ಎಂ.ಎಂ.ಡಿ.ಆರ್., ವಿಚ್ಛೇದನ ಹೊರತಾದ ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು, ಪಿಂಚಣಿ, ವೇತನ, ವಿದ್ಯುತ್, ನೀರಿನ ಶುಲ್ಕ, ಕೈಗಾರಿಕಾ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯಿಂದ ಬಗೆಹರಿಸಿ ಕೊಳ್ಳಬಹುದು ಎಂದವರು ಹೇಳಿದರು.

**8 ಸಾವಿರ ಪ್ರಕರಣಗಳ ಇತ್ಯರ್ಥ ಗುರಿ**

ಕಕ್ಷಿದಾರರಿಗೆ ಅನುಕೂಲವಾಗಲಿ ಎಂದು ರಾಜಿ ಪೂರ್ವ ಸಮಾಲೋಚನೆ ಗಳನ್ನೂ ಕೂಡ ಆಯೋಜಿಸಲಾಗಿದೆ ಎಂದು ರಾಜೇಶ್ವರಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ರಾಜಿ ಮಾಡಬಹುದಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾರಂಟ್ ಹೊರಡಿಸುವ ಹಾಗೂ ಸಣ್ಣ ಪುಟ್ಟ ಪ್ರಕರಣಗಳ ಇತ್ಯರ್ಥಕ್ಕೆ ಸಹಕಾರದ ಮೂಲಕ ಲೋಕ್ ಅದಾಲತ್‌ಗಳಲ್ಲಿ ಹೆಚ್ಚಿನ ಪ್ರಕರಣಗಳನ್ನು ಇತ್ಯರ್ಥಪಡಿಸಲು ಪೊಲೀಸ್ ಇಲಾಖೆ ನೆರವಾಗುತ್ತಿದೆ ಎಂದರು.

ಜಿಲ್ಲಾ ವಕೀಲರ ಒಕ್ಕೂಟದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಜಿಲ್ಲಾ ವಕೀಲರ ಒಕ್ಕೂಟದ ವತಿಯಿಂದ ಲೋಕ್ ಅದಾಲತ್‌ಗಳಿಗೆ ಹಿಂದಿನಿಂದಲೂ ಸಹಕಾರ ನೀಡುತ್ತಾ ಬರಲಾಗಿದೆ. ಕಕ್ಷಿದಾರರಿಗೆ ಲೋಕ್ ಅದಾಲತ್ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಹೆಚ್ಚಿನ ಮಾಹಿತಿಗಾಗಿ ದಾವಣಗೆರೆ ಹಳೆ ನ್ಯಾಯಾಲಯದ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ದೂ.: 08192 – 296364), ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ ದೂ.: 08192 – 296885, ಹೊನ್ನಾಳಿ ದೂ. :08188 251732, ಚನ್ನಗಿರಿ ದೂ. :08189 – 229195 ಹಾಗೂ ಜಗಳೂರು ದೂ. : 08196 227600 ಇವರನ್ನು ಸಂಪರ್ಕಿಸಬಹುದು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಸಿ.ಜೆ.ಎಂ. ನ್ಯಾಯಾಧೀಶೆ ಟಿ.ಎಂ. ನಿವೇದಿತ, ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್ ಹಾಗೂ ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ಉಪಸ್ಥಿತರಿದ್ದರು.

### ರಾಜೀ ಸಂಧಾನಕ್ಕೆ ತಂತ್ರಜ್ಞಾನ ಬಳಕೆ

ಕಕ್ಷಿದಾರರು ತಾವಿರುವ ಸ್ಥಳದಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಿರುವುದರಿಂದ ಹೆಚ್ಚಿನ ಪ್ರಕರಣಗಳ ಇತ್ಯರ್ಥಕ್ಕೆ ನೆರವಾಗುತ್ತಿದೆ ಎಂದು ಸಿ.ಜೆ.ಎಂ. ನ್ಯಾಯಾಧೀಶೆ ಟಿ.ಎಂ. ನಿವೇದಿತ ಹೇಳಿದರು.

ವಾಟ್ಸ್‌ಆಪ್ ಮೂಲಕ ರಾಜಿ ಸಂಧಾನಕ್ಕೆ ಹಾಜರಾಗುವ ಮೆಸೇಜ್ ಕಳಿಸಲಾಗುತ್ತಿದೆ. ಆನ್‌ಲೈನ್ ಮೂಲಕ ಸಂಧಾನಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಇದು ಜನರಿಗೆ ಹೆಚ್ಚು ಅನುಕೂಲಕರವಾಗಿದೆ ಎಂದರು.

ಜಿಲ್ಲಾ ಹಂತದ ನ್ಯಾಯಮೂರ್ತಿಗಳೂ ತಾಲ್ಲೂಕು ನ್ಯಾಯಾಲಯಗಳಲ್ಲಿ ರಾಜಿ ಸಂಧಾನ ಪ್ರಕ್ರಿಯೆಯಲ್ಲಿ ಭಾಗಿಯಾಗುತ್ತಿದ್ದಾರೆ. ಇದರ ಜೊತೆಗೆ ವಕೀಲರೂ ಸಹಕರಿಸುತ್ತಿದ್ದಾರೆ. ಇದರಿಂದ ಕಕ್ಷಿದಾರರಿಗೆ ರಾಜಿ ಸಂಧಾನದ ಬಗ್ಗೆ ಹೆಚ್ಚು ವಿಶ್ವಾಸ ಮೂಡುತ್ತಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಹೇಳಿದರು.

### ಮೂರು ವ್ಯಾಜ್ಯಮುಕ್ತ ಗ್ರಾಮಗಳು

ದಾವಣಗೆರೆ ತಾಲ್ಲೂಕಿನ ಬಾವಿಹಾಳ, ಓಬಣ್ಣನಹಳ್ಳಿ ಹಾಗೂ ಶ್ರೀ ರಂಗಯ್ಯನ ಮಟ್ಟಿ (ಗುಡ್ಡದ ಕ್ಯಾಂಪ್)ಗಳನ್ನು ವ್ಯಾಜ್ಯ ಮುಕ್ತ ಗ್ರಾಮಗಳನ್ನಾಗಿ ಮಾಡಲು ಆಯ್ದುಕೊಳ್ಳಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ತಿಳಿಸಿದರು.

ಈ ಗ್ರಾಮಗಳವರಿಗೆ ಸಂಬಂಧಿಸಿದ ನ್ಯಾಯಾಲಯದ ಪ್ರಕರಣಗಳನ್ನು ಈಗಾಗಲೇ ಇತ್ಯರ್ಥ ಪಡಿಸಲಾಗಿದೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮಾತ್ರ ಕೆಲ ಪ್ರಕರಣಗಳಿವೆ. ಇವುಗಳನ್ನೂ ವಿಶೇಷವಾಗಿ ಪರಿಗಣಿಸಿ ರಾಜಿ ಮೂಲಕ ಬಗೆಹರಿಸುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ನ್ಯಾಯಾಧೀಶ ಕರೆಣ್ಣವರ ಹೇಳಿದರು.

# ಶೀಘ್ರ ಪಥ ನ್ಯಾಯಾಲಯಗಳಿಂದ ಶೇ.94 ಪ್ರಕರಣಗಳು ಇತ್ಯರ್ಥ

## ಉಳಿದ ನ್ಯಾಯಾಲಯಗಳಲ್ಲಿ ಶೇ.10ರಷ್ಟು ಲೈಂಗಿಕ ಪ್ರಕರಣಗಳು ಮಾತ್ರ ಇತ್ಯರ್ಥ

ನವದೆಹಲಿ, ಸೆ. 11 - ಲೈಂಗಿಕ ಅಪರಾಧಗಳಿಗೆ ಸಂಬಂಧಿಸಿದ ವಿಶೇಷ ಶೀಘ್ರ ಪಥ ನ್ಯಾಯಾಲಯಗಳು 2023ರಲ್ಲಿ ಶೇ.94ರಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಿವೆ. ಇದೇ ಅವಧಿಯಲ್ಲಿ ಎಲ್ಲಾ ನ್ಯಾಯಾಲಯಗಳ ವಿಲೇವಾರಿ ಪ್ರಮಾಣ ಶೇ.10ರಷ್ಟು ಮಾತ್ರವಾಗಿದೆ ಎಂದು ವರದಿಯೊಂದು ತಿಳಿಸಿದೆ.

ಮಕ್ಕಳ ಹಕ್ಕುಗಳ ಸಂಘಟನೆಯಾದ ಇಂಡಿಯಾ ಚೈಲ್ಡ್ ಪ್ರೊಟೆಕ್ಷನ್ ರೂಪಿಸಿರುವ ವರದಿಯ ಪ್ರಕಾರ, ಶೀಘ್ರಪಥ ನ್ಯಾಯಾಲಯಗಳಲ್ಲಿ 2022ರಲ್ಲಿ ಶೇ.83ರಷ್ಟು ಹಾಗೂ 2023ರಲ್ಲಿ ಶೇ.94ರಷ್ಟು ಪ್ರಕರಣಗಳು ಇತ್ಯರ್ಥಗೊಂಡಿದ್ದವು. ಇದೇ ಅವಧಿಯಲ್ಲಿ ಎಲ್ಲಾ ಭಾರತೀಯ ನ್ಯಾಯಾಲಯಗಳು ಅತ್ಯಾಚಾರ ಹಾಗೂ ಪೋಕ್ಸೋ ಪ್ರಕರಣಗಳನ್ನು ಶೇ.10ರಷ್ಟು ಮಾತ್ರ ಇತ್ಯರ್ಥಪಡಿಸಲು ಸಾಧ್ಯವಾಗಿದೆ ಎಂದು ವರದಿ ತಿಳಿಸಿದೆ.

2024ರಲ್ಲಿ ದೇಶದಲ್ಲಿ 755 ಶೀಘ್ರಪಥ ನ್ಯಾಯಾಲಯಗಳಿದ್ದವು. ಇವುಗಳಲ್ಲಿ 410 ಪೋಕ್ಸೋ ಪ್ರಕರಣಗಳಿಗೆ ಮಾತ್ರ ಕಾರ್ಯನಿರ್ವಹಿಸುತ್ತಿದ್ದವು ಎಂದು ವರದಿ ತಿಳಿಸಿದೆ.

2018ರಲ್ಲಿ ಶೀಘ್ರಪಥ ನ್ಯಾಯಾಲಯ ಯೋಜನೆ ಆರಂಭಿಸಿದ ನಂತರ 4.16 ಲಕ್ಷ ಪೋಕ್ಸೋ ಹಾಗೂ ಅತ್ಯಾಚಾರ ಪ್ರಕರಣಗಳನ್ನು ಇವುಗಳಿಗೆ ವಹಿಸಲಾಗಿತ್ತು. ಈ ಪೈಕಿ ಶೇ.52 ರಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.

ಮಹಾರಾಷ್ಟ್ರದಲ್ಲಿ ಶೇ.80 ಹಾಗೂ ಪಂಜಾಬ್‌ನಲ್ಲಿ ಶೇ.71ರಷ್ಟು ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಅತಿ ಕಡಿಮೆ ಶೇ.2ರಷ್ಟು ಪ್ರಕರಣಗಳು ಮಾತ್ರ ಇತ್ಯರ್ಥವಾಗಿವೆ. ಪಶ್ಚಿಮ ಬಂಗಾಳಕ್ಕೆ 123 ಶೀಘ್ರಪಥ ನ್ಯಾಯಾಲಯಗಳನ್ನು ಮಂಜೂರು ಮಾಡಲಾಗಿತ್ತು. ಈ ಪೈಕಿ ಮೂರು ನ್ಯಾಯಾಲಯಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ.

2023ರಲ್ಲಿ ಶೀಘ್ರಪಥ ನ್ಯಾಯಾಲಯಗಳಿಗೆ 81,471 ಪ್ರಕರಣಗಳನ್ನು ವಹಿಸಲಾಗಿತ್ತು. ಈ ಪೈಕಿ 76,319 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಇದು ಶೇ.94ರಷ್ಟಾಗಿದೆ. ಇಷ್ಟಾದರೂ ಇನ್ನಷ್ಟು ಶೀಘ್ರಪಥ ನ್ಯಾಯಾಲಯಗಳನ್ನು ಸ್ಥಾಪಿಸಬೇಕಿದೆ. ಇಲ್ಲದೇ ಹೋದರೆ ನ್ಯಾಯಾಲಯದಲ್ಲಿ ಬಾಕಿ ಇರುವ 2 ಲಕ್ಷ ಪ್ರಕರಣಗಳನ್ನು ಬಗೆಹರಿಸಲು ಸಾಧ್ಯವಾಗುವುದಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

## ತೆರಿಗೆ ಅನ್ಯಾಯ : ಎಂಟು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸಿದ್ದರಾಮಯ್ಯ ಪತ್ರ

ಬೆಂಗಳೂರು, ಸೆ. 11 - ಕೇಂದ್ರ ಸರ್ಕಾರ ತೆರಿಗೆ ವಿತರಣೆಯಲ್ಲಿ ಅನ್ಯಾಯ ಮಾಡುತ್ತಿದೆ ಎಂದು ಎಂಟು ರಾಜ್ಯಗಳ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. 'ವಿತ್ತೀಯ ಒಕ್ಕೂಟ' ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಸಭೆಗೆ ಬರಲು ಅವರಿಗೆ ಆಹ್ವಾನ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ಗುಜರಾತ್, ಹರಿಯಾಣ ಹಾಗೂ ಪಂಜಾಬ್ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದಾಗಿ ಅವರು ಹೇಳಿದರು.

## ವಿಮಾನ ನಿಲ್ದಾಣ ಶುಲ್ಕ ಹೆಚ್ಚಳಕ್ಕೆ ಐಎಟಿಎ ಕಳವಳ

ನವದೆಹಲಿ, ಸೆ. 11 - ವಿಮಾನ ನಿಲ್ದಾಣದ ಶುಲ್ಕ ಗಣನೀಯವಾಗಿ ಹೆಚ್ಚಿಸಿರುವುದಕ್ಕೆ ಜಾಗತಿಕ ವಿಮಾನಯಾನ ಸಂಸ್ಥೆಗಳ ಸಂಘಟನೆಯಾದ ಐ.ಎ.ಟಿ.ಎ. ಕಳವಳ ವ್ಯಕ್ತಪಡಿಸಿದೆ.

ವಿಮಾನ ನಿಲ್ದಾಣದ ಶುಲ್ಕ ಹೆಚ್ಚಿಸಲು ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ ಇತ್ತೀಚೆಗೆ ಅನುಮತಿ ನೀಡಿತ್ತು.

ಸ್ವಯಂ ಚಾಲಿತವಾಗಿ ಶುಲ್ಕ ಹೆಚ್ಚಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಭಾರತದಲ್ಲಿ ವಿಮಾನ ನಿಲ್ದಾಣದ ಶುಲ್ಕ ಗಣನೀಯವಾಗಿ ಏರಿಕೆಯಾಗುತ್ತಿದೆ. ಬೆಲೆ ನಿಯಂತ್ರಿಸಿದಾಗ ಮಾತ್ರ ಹೆಚ್ಚು ಜನರು ವಿಮಾನಯಾನಕ್ಕೆ ಬರುತ್ತಾರೆ ಎಂದು ಐ.ಎ.ಟಿ.ಎ. ಪ್ರಧಾನ ನಿರ್ದೇಶಕ ವಿಲ್ಲಿ ವಾಲ್ಷ್ ಹೇಳಿದ್ದಾರೆ.

## ನಗರದಲ್ಲಿ ಇಂದು ತಮಟೆ ಚಳವಳಿ

ದಾವಣಗೆರೆ, ಸೆ. 11- ಪರಿಶಿಷ್ಟ ಜಾತಿಗೊಳಪಟ್ಟ ಉಪ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂಬ ಸರ್ವೋಚ್ಛ ನ್ಯಾಯಾಲಯದ (ಸುಪ್ರಿಂಕೋರ್ಟ್) ಐತಿಹಾಸಿಕ ತೀರ್ಪಿನ ಹಿನ್ನೆಲೆಯಲ್ಲಿ ಒಳ ಮೀಸಲಾತಿ ಜಾರಿ ಮಾಡುವುದು ಸೇರಿದಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಾಳೆ ದಿನಾಂಕ 12 ರಂದು ಏಕಕಾಲಕ್ಕೆ ತಮಟೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ತಮಟೆ ಚಳವಳಿಯ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ಒಳ ಮೀಸಲಾತಿ ಅನುಷ್ಠಾನಕ್ಕೆ ತರುವ ಅಧಿಕಾರ ಆಯಾ ರಾಜ್ಯ ಸರ್ಕಾರಗಳಿಗೆ ಇದೇ ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ಸ್ವಾಗತಾರ್ಹ.

ಈ ತೀರ್ಪನ್ನು ರಾಜ್ಯ ಸರ್ಕಾರ ಚಾಚೂ ತಪ್ಪದೇ ಪಾಲಿಸಿ, ಒಳಮೀಸಲಾತಿ ಜಾರಿಗೆ ಮುಂದಾಗಬೇಕೆಂದರು.

ನಾಳೆ ಗುರುವಾರ ಬೆಳಿಗ್ಗೆ 11 ಗಂಟೆಯಿಂದ ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಹಳೆ ಪಿ.ಬಿ. ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿಯವರೆಗೆ 'ಬೃಹತ್ ತಮಟೆ' ಚಳವಳಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಪದಾಧಿಕಾರಿಗಳಾದ ಹನುಮಂತಪ್ಪ ಅಣಜಿ, ಹರಿಹರದ ಪಿ.ಜೆ. ಮಹಾಂತೇಶ್, ಹನುಮಂತಪ್ಪ ಬೇತೂರು, ನಾಗರಾಜ್ ಬಿ. ಚಿತ್ತಾನಹಳ್ಳಿ, ಕೆ. ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

# ಎಲೆಕ್ಟ್ರಿಕ್ ವಾಹನಗಳಿಗೆ 14,335 ಕೋಟಿ ರೂ.ಗಳ ಯೋಜನೆಗೆ ಒಪ್ಪಿಗೆ

ನವದೆಹಲಿ, ಸೆ. 11 - ಎಲೆಕ್ಟ್ರಿಕ್ ವಾಹನಗಳಿಗೆ ಉತ್ತೇಜನ ನೀಡುವ 14,355 ಕೋಟಿ ರೂ.ಗಳ ಎರಡು ಪ್ರಮುಖ ಯೋಜನೆಗಳಿಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಪಿಎಂ ಇ - ಡ್ರೈವ್ ಯೋಜನೆ ಮೂಲಕ 10,900ಕೋಟಿ ರೂ.ಗಳನ್ನು ಎರಡು ವರ್ಷಗಳ ಅವಧಿಗೆ ಒದಗಿಸಲಾಗುವುದು ಹಾಗೂ ಪಿಎಂ - ಇ ಬಸ್ ಸೇವಾ ಪೇಮೆಂಟ್ ಸೆಕ್ಯೂರಿಟಿ ಮೆಕ್ಯಾನಿಸಂ ಯೋಜನೆಗೆ 3,435 ಕೋಟಿ ರೂ. ಒದಗಿಸಲಾಗುವುದು.

ಈ ಬಗ್ಗೆ ಮಾಹಿತಿ ನೀಡಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ದ್ವಿಚಕ್ರ, ತ್ರಿಚಕ್ರ, ಇ - ಆಂಬುಲೆನ್ಸ್, ಇ - ಲಾರಿ ಸೇರಿದಂತೆ ಎಲೆಕ್ಟ್ರಿಕ್ ವಾಹನಗಳಿಗೆ 3,679 ಕೋಟಿ ರೂ.ಗಳ ಸಬ್ಸಿಡಿ ನೀಡಲಾಗುವುದು ಎಂದರು. ಇದೇ ವೇಳೆ, ಹವಾಮಾನ ವೈಪರೀತ್ಯ ಘಟನೆಗಳ ಮುನ್ಸೂಚನೆ ಪಡೆಯಲು ಹಾಗೂ ಪರಿಸರ ಬದಲಾವಣೆ ಕುರಿತು ಕ್ರಮ ತೆಗೆದುಕೊಳ್ಳಲು 2,000 ಕೋಟಿ ರೂ.ಗಳ 'ಮಿಷನ್ ಮೌಸಮ್' ಯೋಜನೆಗೆ ಒಪ್ಪಿಗೆ ನೀಡಲಾಗಿದೆ.

# ಹತ್ತು ವರ್ಷಗಳಲ್ಲಿ ಗಂಡಂದಿರ ವಿರುದ್ಧ ಹತ್ತು ಹುಸಿ ದೂರು

## ಮಹಿಳೆ ಪತ್ತೆ ಮಾಡಲು ಹೈಕೋರ್ಟ್ ಸೂಚನೆ

ಬೆಂಗಳೂರು, ಸೆ. 11 - ಕಳೆದ ದಶಕದಲ್ಲಿ 498ಎ ಸೆಕ್ಷನ್ ಅನ್ವಯ ಬೇರೆ ಬೇರೆ ವ್ಯಕ್ತಿಗಳ ವಿರುದ್ಧ ಒಂಭತ್ತು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ ಮಹಿಳೆಯನ್ನು ಪತ್ತೆ ಮಾಡುವಂತೆ ರಾಜ್ಯ ಪೊಲೀಸರಿಗೆ ಕರ್ನಾಟಕ ಹೈಕೋರ್ಟ್ ನಿರ್ದೇಶನ ನೀಡಿದೆ.

ಗಂಡ ಇಲ್ಲವೇ ಗಂಡನ ಸಂಬಂಧಿಗಳು ಹಿಂಸೆ ನೀಡಿದಾಗ ಮಹಿಳೆ ದೂರು ನೀಡಲು ಸೆಕ್ಷನ್ 498ಎ ರೂಪಿಸಲಾಗಿದೆ.

ಈ ಹಿಂದಿನ ಒಂಭತ್ತು ಪ್ರಕರಣಗಳಲ್ಲಿ ಬೇರೆ ಬೇರೆ ವ್ಯಕ್ತಿಗಳನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಅವರನ್ನು ಬಂಧಿಸಲಾಗಿತ್ತು. ಆದರೆ, ಸಾಕ್ಷಿಗಳ ಕೊರತೆ ಇಲ್ಲವೇ ದೂರುದಾರೆಯ ಅಸಹಕಾರದ ಕಾರಣದಿಂದ ಅವರೆಲ್ಲರೂ ಖುಲಾಸೆಗೊಂಡಿದ್ದರು.

ಆರೋಪಿಗಳನ್ನು ಪೀಡಿಸಲು ಮಹಿಳೆ ಈ ರೀತಿ ಮಾಡುತ್ತಿರಬಹುದು. ಹತ್ತಕ್ಕೂ ಹೆಚ್ಚು ಪುರುಷರನ್ನು ಮಹಿಳೆ ಹನಿ ಟ್ರಾಪ್ ಮಾಡಿದ್ದಾಳೆ ಎನ್ನಿಸುತ್ತಿದೆ ಎಂದು ನ್ಯಾಯಾಲಯ ತಿಳಿಸಿದೆ.

ಈ ಮಹಿಳೆಯ ದೂರುಗಳ ದಾಖಲೆಗಳನ್ನು ಪೊಲೀಸರು ಪರಿಶೀಲಿಸಬೇಕು. ಮತ್ತಷ್ಟು ಪ್ರಕರಣಗಳನ್ನು ದಾಖಲಿಸಲು ಬಂದರೆ ಎಚ್ಚರಿಕೆ ವಹಿಸಬೇಕು ಎಂದು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತಿಳಿಸಿದೆ.

ಯಾವುದೇ ಹೊಸ ದೂರುಗಳು ದಾಖಲಾದ ಸಂದರ್ಭದಲ್ಲಿ, ಪ್ರಾಥಮಿಕ ತನಿಖೆ ನಡೆಸಬೇಕು. ಇದರಿಂದ ಪದೇ ಪದೇ ಸುಳ್ಳು ಪ್ರಕರಣ ದಾಖಲಿಸುವುದು ತಪ್ಪುತ್ತದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಮಹಿಳೆಯ ದಾಖಲಿಸಿದ ದೂರಿನಿಂದ ಮುಕ್ತಗೊಳಿಸುವಂತೆ ಪತಿ ಹಾಗೂ ಅತ್ತೆ ಮಾವಂದಿರು ಸಲ್ಲಿಸಿದ ಮನವಿಯನ್ನು ಹೈಕೋರ್ಟ್ ಅಂಗೀಕರಿಸಿದೆ. ಐ.ಪಿ.ಸಿ.ಯ ಸೆಕ್ಷನ್ 323, 498ಎ, 504, 506 ಹಾಗೂ 149ರ ಅನ್ವಯ ದೂರು ದಾಖಲಿಸಲಾಗಿತ್ತು.

ಮಹಿಳೆ ಕಳೆದ ಹತ್ತು ವರ್ಷಗಳಲ್ಲಿ ಹತ್ತು ಬಾರಿ ದೂರು ದಾಖಲಿಸಿರುವುದನ್ನು ನ್ಯಾಯಾಲಯ ಪರಿಗಣಿಸಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮೂರ್ತಿ ಡಿ. ನಾಯಕ್, ಮಹಿಳೆ ಈ ಹಿಂದೆ ದೂರುಗಳನ್ನು ನೀಡಿದ ಹಾಗೂ ಪ್ರಾಸಿಕ್ಯೂಷನ್ ಪರಿಶೀಲಿಸಿದ ಸಾಕ್ಷಿಗಳನ್ನು ಹಾಜರು ಪಡಿಸಿದರು.

ಯಾವುದೇ ಪುರಾವೆ ಇಲ್ಲದೇ ದೂರುಗಳನ್ನು ದಾಖಲಿಸಲಾಗಿದೆ. ಇದರಿಂದ ಬಂಧನ ಹಾಗೂ ವಿಚಾರಣೆಯಾಗಿ, ಅಂತಿಮವಾಗಿ ಎಲ್ಲರೂ ಖುಲಾಸೆಯಾಗಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ಇತ್ತೀಚಿನ 2022ರ ಪ್ರಕರಣದಲ್ಲಿ ಗಂಡ ಹಾಗೂ ಆತನ ಕುಟುಂಬದವರ ವಿರುದ್ಧ ಮಹಿಳೆ ದೂರು ದಾಖಲಿಸಿದ್ದಳು. ಇವರಲ್ಲಿ ಮಹಿಳೆಯನ್ನು ಎಂದೂ ಭೇಟಿ ಮಾಡದ 75 ವರ್ಷದ ವೃದ್ಧೆ ಸಹ ಸೇರಿದ್ದಾರೆ.

ಆರೋಪಗಳು ಆಧಾರ ರಹಿತವಾಗಿವೆ. ಪ್ರಕರಣ ಮುಂದುವರೆಸಿದರೆ ದೂರುದಾರೆಯ ಪ್ರಶ್ನಾರ್ಹ ಕ್ರಮಗಳಿಗೆ ಒಪ್ಪಿದಂತಾಗುತ್ತದೆ. ಕಾನೂನು ವ್ಯವಸ್ಥೆಯ ದುರ್ಬಳಕೆ ತಡೆಯಬೇಕು ಹಾಗೂ ಅಮಾಯಕರನ್ನು ಹುಸಿ ಪ್ರಕರಣದಿಂದ ರಕ್ಷಿಸಬೇಕು ಎಂದು ನ್ಯಾಯಾಲಯ ಹೇಳಿದೆ.


**ತುಂಗಾ ಪತ್ತಿನ ಸಹಕಾರ ಸಂಘ ನಿಯಮಿತ, ಹೊನ್ನಾಳಿ.**
ನ್ಯಾಮತಿ ರಸ್ತೆ, ಎಲ್.ಐ.ಸಿ. ಆಫೀಸ್ ಹತ್ತಿರ, ಹಿರೇಕಲ್ಮಠ ಹೊನ್ನಾಳಿ-577217, ದಾವಣಗೆರೆ ಜಿಲ್ಲೆ

(ರಿ.ನಂ., ಎ.ಆರ್.ಎಸ್. 16948/88-89)

**ಪರಿಷ್ಕೃತ ಪ್ರಕಟಣೆ**

ಸಂಘದಲ್ಲಿ ಖಾಲಿ ಇರುವ ಕಾರ್ಯದರ್ಶಿ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿದೆ.

| ಕ್ರ.ಸಂ | ಪ್ರಶ್ನಾವಳಿ | ವಿವರ |
|---|---|---|
| 01 | ಹುದ್ದೆಯ ಹೆಸರು ಮತ್ತು ಸಂಖ್ಯೆ | ಕಾರ್ಯದರ್ಶಿ - 01 |
| 02 | ವೇತನ | ರೂ. 19000-500-21000-600-24600-700-28800-800-33600-900-34500 |
| 03 | ಅರ್ಹತಾದಾಯಕ ಸೇವಾ ಅವಧಿ | 2 ವರ್ಷಗಳು |
| 04 | ವಿದ್ಯಾರ್ಹತೆ | ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಪಡೆದಿರಬೇಕು. (ಜಿ.ಡಿ.ಸಿ. ಆದವರಿಗೆ-01 ಕೃಪಾಂಕವಿರುತ್ತದೆ.) ಹಾಗೂ ಸರ್ಕಾರದಿಂದ ಅಂಗೀಕೃತಗೊಂಡ ಸಂಸ್ಥೆಯಿಂದ ಮೂಲ ಕಂಪ್ಯೂಟರ್ ಆಪರೇಟಿವ್ ಕೋರ್ಸ್ (ಬೇಸಿಕ್ ಮತ್ತು ಟ್ಯಾಲಿ) ಮಾಡಿರಬೇಕು |
| 05 | ವಯೋಮಿತಿ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 40 ವರ್ಷ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 38 ವರ್ಷ, ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ವಯೋಮಿತಿ ಒಳಗೆ ಇರಬೇಕು. |
| 06 | ಅರ್ಜಿ ಸಲ್ಲಿಸಲು ಅರ್ಹತೆ | ಪದವಿಯಲ್ಲಿ ಅಗ್ರಿಗೇಟ್ ಶೇಕಡ 60% ಹೆಚ್ಚಿನ ಅಂಕಗಳಿಸಿರಬೇಕು 01 ಹುದ್ದೆ ಇರುವುದರಿಂದ ಮೀಸಲಾತಿ ಇಲ್ಲ. |
| 07 | ಅರ್ಜಿಯ ಶುಲ್ಕ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ/ಪ್ರವರ್ಗ-1, ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅಭ್ಯರ್ಥಿಗಳಿಂದ 500.00ಗಳು ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 1000.00 ಗಳನ್ನು ನಗದಾಗಿ ಸಂಘಕ್ಕೆ ಪಾವತಿಸಿ ರಸೀದಿ ಪಡೆಯುವುದು. |
| 08 | ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು | 1) ಎಸ್.ಎಸ್.ಎಲ್.ಸಿ. ಅಂಕಪಟ್ಟಿ 2) ಪದವಿ ಅಂಕಪಟ್ಟಿ 3) ಸಹಕಾರ ಸಂಸ್ಥೆಯಲ್ಲಿ ಅನುಭವ ಹೊಂದಿದ್ದಲ್ಲಿ ದೃಢೀಕರಣ ಪತ್ರ 4) ಮತದಾರರ ಗುರುತಿನ ಚೀಟಿ 5) ಆಧಾರ್ ಕಾರ್ಡ್ |
| 09 | ಅರ್ಜಿ ಸಲ್ಲಿಸುವ ಅವಧಿ | ಅರ್ಜಿಯನ್ನು ದಿ. 12-9-2024 ರಿಂದ 26-09-2024ರವರೆಗೆ ಬೆಳಿಗ್ಗೆ 11.00 ರಿಂದ ಸಂಜೆ 5.00 ಗಂಟೆಯ ಒಳಗೆ ಸಂಘದ ಕಛೇರಿಗೆ ಸಲ್ಲಿಸಬೇಕು. |
| 10 | ಅರ್ಜಿ ಸಲ್ಲಿಸುವ ವಿಳಾಸ | ಸಂಘದ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ, ತುಂಗಾ ಪತ್ತಿನ ಸಹಕಾರ ಸಂಘ ನಿ., ಹೊನ್ನಾಳಿ, ಹಿರೇಕಲ್ಮಠ ಹತ್ತಿರ, ನ್ಯಾಮತಿ ರಸ್ತೆ, ಹೊನ್ನಾಳಿ. |

**ಸೂಚನೆ : ಅರ್ಜಿ ನಮೂನೆಯನ್ನು ಸಂಘದ ಕಛೇರಿ ವೇಳೆಯಲ್ಲಿ ಪಡೆಯಬಹುದು**

**ನೇಮಕಾತಿ ವಿವರಗಳು:** 01) ಅರ್ಹತಾದಾಯಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ. 85% ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅದನ್ನು ಆಧರಿಸಿ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. 02) ಸಂದರ್ಶನಕ್ಕೆ 15 ಅಂಕಗಳನ್ನು ನಿಗಧಿಪಡಿಸಿದ್ದು ಅದರಲಿ ಗಳಿಸಿರುವ ಅಂಕಗಳನ್ನು ಸಹಕಾರ ವಿಷಯದಲ್ಲಿ ಸ್ನಾತಕೋತ್ಸರ ಪದವಿ ಜಿ.ಡಿ.ಸಿ. ಅರ್ಹತೆ ಹೊಂದಿದಲ್ಲಿ ವಿಶೇಷ ಕೃಪಾಂಕ ಒಂದನ್ನು ಸೇರಿಸಿ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು.

**ವಿ.ಸೂ. ದಿನಾಂಕ : 10.09.2024ನೇ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ ಅರ್ಜಿಸಲ್ಲಿಸುವ ಕೊನೆಯ ದಿನಾಂಕ : ತಪ್ಪಾಗಿದ್ದು, ಮರು ಪರಿಷ್ಕೃತ ಪ್ರಕಟಣೆ ಹೊರಡಿಸಲಾಗಿದೆ.**

ಸಹಿ/- ಸದಸ್ಯ ಪ್ರಭಾರ ಕಾರ್ಯದರ್ಶಿ
ಸಿಬ್ಬಂದಿ ನೇಮಕಾತಿ ಸಮಿತಿ, ತುಂಗಾ ಪತ್ತಿನ ಸಹಕಾರ ಸಂಘ ನಿ., ಹೊನ್ನಾಳಿ.

# ಬಿಜೆಪಿ ಹಗರಣ : ತಪ್ಪಿಗೆ ಶಿಕ್ಷೆ ಖಚಿತ

## ಭ್ರಷ್ಟಾಚಾರದ ಹಗರಣಗಳಿಗೆ ಗತಿ ಕಾಣಿಸುವುದಾಗಿ ಹೇಳಿದ ಸಿದ್ದರಾಮಯ್ಯ

ಬೆಂಗಳೂರು, ಸೆ.11 - ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಮುಗಿಸುವುದರಲ್ಲಿ ಯಾವುದೇ ಸಂಶಯ ಬೇಡ ಎಂದಿರುವ ಸಿದ್ದರಾಮಯ್ಯ, ಬಿಜೆಪಿ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರದ ಹಗರಣಗಳಿಗೆ ಗತಿ ಕಾಣಿಸುವುದಾಗಿ ಘೋಷಿಸಿದ್ದಾರೆ.

ಬಿಜೆಪಿ ಮುಖಂಡರ ರೀತಿ ನಾವು ದ್ವೇಷ ರಾಜಕಾರಣ ಮಾಡುವುದಿಲ್ಲ. ಆದರೆ, ಅವರ ಆಡಳಿತಾವಧಿಯ 21 ಪ್ರಮುಖ ಹಗರಣಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದು ಖಚಿತ ಎಂದಿದ್ದಾರೆ.

ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಹೀಗಾಗಿ ಯಾರೂ ಕುರ್ಚಿಗೆ ಆಸೆ ಪಡುತ್ತಿಲ್ಲ. ಕೆಲವು ಸಚಿವರು ಸೇರಿದಂತೆ ಪಕ್ಷದ ಮುಖಂಡರು ಸಿದ್ದರಾಮಯ್ಯ ಅವರೇ ಮುಂದುವರೆಯಬೇಕು ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಕುರ್ಚಿ ಖಾಲಿಯಾದರೆ ನಾವು ಅದಕ್ಕೆ ಅರ್ಹರಿದ್ದೇವೆ ಎಂದು ಹೇಳುತ್ತಿದ್ದಾರೆ ಅಷ್ಟೇ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಅದರಲ್ಲಿ ಏನೂ ತಪ್ಪಿಲ್ಲ. ಎಲ್ಲರಲ್ಲೂ ನಾನೇ ಮುಖ್ಯಮಂತ್ರಿಯಾಗಿ ಮುಂದುವರೆ ಯಬೇಕು ಎಂಬ ಇಚ್ಛೆ ಇರುವಾಗ ಆಡಳಿತದಲ್ಲಿ ನಾನು ಮುಂದುವರೆಯುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಅರಣ್ಯ ಭವನದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಆಡಳಿತದ 40 ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿ ಸೇರಿದಂತೆ ಸಚಿವರು ಭಾರೀ ಭ್ರಷ್ಟಾಚಾರ ನಡೆಸಿದ್ದಾರೆ. ಅವರು ಮಾಡಿರುವ ಭ್ರಷ್ಟಾಚಾರದ ಪಟ್ಟಿಯನ್ನು ಸದನದಲ್ಲೇ ಬಿಡುಗಡೆ ಮಾಡಿದ್ದೇನೆ. ಅವುಗಳ ಬಗ್ಗೆ ಒಂದಲ್ಲಾ ಒಂದು ತನಿಖೆ ಆರಂಭಗೊಂಡಿದೆ ಎಂದರು.

ತನಿಖೆಯ ಪ್ರಗತಿ ಮತ್ತು ಅದಕ್ಕೆ ವೇಗ ಕೊಡುವ ಉದ್ದೇಶದಿಂದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವರ ಸಮಿತಿ ರಚಿಸಿದ್ದೇನೆ. ಈ ಎಲ್ಲಾ ಹಗರಣಗಳ ತನಿಖೆಗೆ ತ್ವರಿತ ಚಾಲನೆ ನೀಡುವ ಉದ್ದೇಶದಿಂದಲೇ ಸಮಿತಿ ನೇಮಕ ಮಾಡಲಾಗಿದೆ. ಈ ಸಮಿತಿ ಎರಡು ತಿಂಗಳಲ್ಲಿ ವರದಿ ನೀಡುವಂತೆ ಗಡುವು ನೀಡಿದ್ದೇನೆ ಎಂದು ಹೇಳಿದರು.

ಪಿಎಸ್‌ಐ ಹಗರಣ, 40% ಕಮೀಷನ್, ಕೋವಿಡ್-19, ಬಿಟ್ ಕಾಯಿನ್ ಹಗರಣಗಳ ಬಗ್ಗೆ ಎಸ್‌ಐಟಿ ಹಾಗೂ ಕೆಲವು ಆಯೋಗಗಳಿಂದ ತನಿಖೆ ನಡೆಯುತ್ತಿದೆ.

ಇವು ಸೇರಿದಂತೆ ಉಳಿದ ಹಗರಣಗಳ ಬಗ್ಗೆಯೂ ಸಮಿತಿ ಕೂಲಂಕುಶವಾಗಿ ಸಮಿತಿ ಪರಿಶೀಲನೆ ನಡೆಸಿ ಅವುಗಳಿಗೆ ಚುರುಕುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ತ್ವರಿತವಾಗಿ ತನಿಖೆ ಮುಗಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುತ್ತಾರೆ ಎಂದವರು ಹೇಳಿದರು.

ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವ ಉದ್ದೇಶದಿಂದ ಸಮಿತಿ ರಚಿಸಲಾಗಿದೆಯೇ ಹೊರತು, ಬಿಜೆಪಿ ವಿರುದ್ಧ ದ್ವೇಷ ರಾಜಕಾರಣ ಮಾಡಲು ಅಲ್ಲ. ಆದರೆ, ಅವರು ನನ್ನ ಬಗ್ಗೆ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಮಾತ್ರ ಅಂತಹ ಕೆಲಸ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕರ್ನಾಟಕದಲ್ಲಷ್ಟೇ ಅಲ್ಲ, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ದ್ವೇಷ ರಾಜಕಾರಣವನ್ನೇ ಮಾಡಿಕೊಂಡು ಬಂದಿದೆ. ದೆಹಲಿ,ತೆಲಂಗಾಣ, ಬಿಹಾರ, ಜಮ್ಮು ಮತ್ತು ಕಾಶ್ಮೀರ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಎಲ್ಲಾ ರಾಜ್ಯಗಳಲ್ಲೂ ತಮಗಾಗದವರ ವಿರುದ್ಧ ಕೇಂದ್ರ ತನಿಖಾ ತಂಡಗಳ ಮೂಲಕ ಹೆದರಿಸಿ ಬೆದರಿಸುವ ಕೆಲಸ ಮಾಡಲಾಗುತ್ತಿದೆ.

ನಾವು ಇಂತಹ ಕೆಲಸ ಮಾಡಿಲ್ಲ. ಅವರು ಮಾಡಿರುವ ಭ್ರಷ್ಟಾಚಾರಕ್ಕೆ ಶಿಕ್ಷೆ ಕೊಡಿಸಬಾರದೇ? ಎಂದು ಮಾಧ್ಯಮದವರನ್ನು ಪ್ರಶ್ನಿಸಿದ ಮುಖ್ಯಮಂತ್ರಿ ಆ ಕಾರಣಕ್ಕಾಗಿಯೇ ತನಿಖೆಗೆ ವಹಿಸಲಾಗಿದೆ ಎಂದು ಹೇಳಿದರು.

### ಮುಂದಿನ ವಾರ ಬಿಜೆಪಿ ಹಗರಣಗಳ ಸಮಿತಿ ಸಭೆ

ಬೆಂಗಳೂರು, ಸೆ. 11 - ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ವಿವಿಧ ಹಗರಣಗಳ ತನಿಖೆಯ ಪ್ರಗತಿ ಬಗ್ಗೆ ವಾರದಲ್ಲೇ ಸಂಪುಟ ಸಮಿತಿ ಸಭೆ ನಡೆಸಿ ಪರಿಶೀಲಿಸಲಿದೆ ಎಂದು ಸಮಿತಿಯ ಅಧ್ಯಕ್ಷರೂ ಆಗಿರುವ ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಎಲ್ಲ ಹಗರಣಗಳನ್ನು ಗುರುತಿಸಿದ್ದೇವೆ. ಅವುಗಳ ತನಿಖೆ ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿ, ಸಚಿವ ಸಂಪುಟಕ್ಕೆ ವರದಿ ಸಲ್ಲಿಸುತ್ತೇವೆ ಎಂದರು.

ತ್ವರಿತಗತಿಯಲ್ಲಿ ತನಿಖೆ ನಡೆಸಬೇಕು ಎಂಬ ಉದ್ದೇಶದಿಂದ ಮುಖ್ಯಮಂತ್ರಿಯವರು ಸಮಿತಿ ರಚಿಸಿದ್ದಾರೆ ಎಂದ ಅವರು, ಹಗರಣಗಳ ತನಿಖೆ ಹಲವಾರು ಹಂತಗಳಲ್ಲಿ ಬಾಕಿ ಇದೆ. ಕೆಲವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ, ಕೆಲವು ಪ್ರಕರಣಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಪರಮೇಶ್ವರ್ ಹೇಳಿದರು.

ಪ್ರಕರಣಗಳು ಕ್ರಮ ತೆಗೆದುಕೊಳ್ಳದೇ ದೂಳು ಹಿಡಿಯಬಾರದು, ಹೀಗಾಗಿ ಪರಿಶೀಲನೆ ನಡೆಸುತ್ತೇವೆ. ಈ ಹಿಂದೆ ಇಲಾಖಾವಾರು ಪರಿಶೀಲನೆ ನಡೆಸುತ್ತಿದ್ದೆವು. ಈಗ ಸಂಪುಟ ಹಂತದಲ್ಲಿ ಪರಿಶೀಲಿಸುತ್ತೇವೆ. ಹೀಗಾಗಿ ಸಮಿತಿ ರಚಿಸಲಾಗಿದೆ. ಇದರಿಂದ ಪ್ರಕ್ರಿಯೆ ಚುರುಕಾಗಲಿದೆ ಎಂದರು.

ಬಿಜೆಪಿ ಅವಧಿಯಲ್ಲಿ 20ರಿಂದ 25 ಹಗರಣಗಳು ನಡೆದಿವೆ. ಇವೆಲ್ಲವನ್ನೂ ಪರಿಶೀಲಿಸಲಾಗುವುದು ಎಂದು ಸಚಿವರು ಹೇಳಿದರು.

ಇದು ದ್ವೇಷ ರಾಜಕೀಯ ಎಂದು ಬಿಜೆಪಿ ಹೇಳಿರುವುದನ್ನು ತಳ್ಳಿ ಹಾಕಿದ ಪರಮೇಶ್ವರ್, ಅವರು ಏನು ಬೇಕಾದರೂ ಹೇಳಿಕೊಳ್ಳಲಿ, ನಾವು ನಮ್ಮ ಕರ್ತವ್ಯ ಮಾಡುತ್ತೇವೆ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಗರಣದ 20.19 ಕೋಟಿ ರೂ.ಗಳನ್ನು ಲೋಕಸಭಾ ಚುನಾವಣೆ ವೇಳೆ ಬಳ್ಳಾರಿಗೆ ರವಾನಿಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯದ ಆರೋಪ ಪಟ್ಟಿಯಲ್ಲಿ ತಿಳಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ತನಿಖೆ ನಂತರ ಸತ್ಯಾಸತ್ಯತೆ ಗೊತ್ತಾಗುತ್ತದೆ ಎಂದರು.

ಮಾಜಿ ಸಚಿವ ಬಿ. ನಾಗೇಂದ್ರ ಹಗರಣದಲ್ಲಿ ಯಾವುದೇ ಪಾತ್ರ ವಹಿಸಿಲ್ಲ ಎಂದು ಕಾಂಗ್ರೆಸ್ ಹೇಳುತ್ತಾ ಬಂದಿದೆ. ಆದರೆ, ಜಾರಿ ನಿರ್ದೇಶನಾಲಯ ಆರೋಪ ಪಟ್ಟಿಯಲ್ಲಿ ನಾಗೇಂದ್ರ ಪ್ರಮುಖ ಆರೋಪಿಯನ್ನಾಗಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ನಾವ್ಯಾರೋ ಹೇಳಿದ ಹೇಳಿಕೆ ಮುಖ್ಯವಲ್ಲ. ತನಿಖಾ ಸಂಸ್ಥೆಗಳು ಸಿಕ್ಕಂತಹ ಸಾಕ್ಷ್ಯಾಧಾರಗಳ ಆಧಾರದ ಮೇಲೆ ತೀರ್ಮಾನ ಮಾಡುತ್ತೇವೆ. ನಾವು ನೀಡುವ ಹೇಳಿಕೆಗಳು ಮೇಲ್ನೋಟಕ್ಕೆ ಮಾತ್ರ ಎಂದರು.

ಮಾಜಿ ಸಚಿವ ನಾಗೇಂದ್ರ, ಅವರ ಪಾತ್ರ ಇದೆ ಎಂದು ಇ.ಡಿ. ಯವರು ಹೇಳುತ್ತಿದ್ದಾರೆ. ಬೇಕಾದಷ್ಟು ಸಲ ಹಾಗೆ ಆಗುತ್ತದೆ. ಅವರು ಹೇಳಿರುವುದಕ್ಕೆ ನಮಗೆ ಸಾಕ್ಷ್ಯ ಸಿಕ್ಕಿರುವುದಿಲ್ಲ. ನಾವು ಹೇಳಿರುವುದಕ್ಕೆ ಅವರಿಗೆ ಸಾಕ್ಷ್ಯ ಸಿಕ್ಕಿರುವುದಿಲ್ಲ. ವಿವಿಧ ತನಿಖಾ ಸಂಸ್ಥೆಗಳ ತನಿಖಾ ವಿಧಾನವೇ ಬೇರೆ ಇರುತ್ತದೆ. ಇ.ಡಿ ಮತ್ತು ಎಸ್‌ಐಟಿಯವರು ಇಬ್ಬರು ಆರೋಪ ಪಟ್ಟಿ ಸಲ್ಲಿಸುತ್ತಾರೆ ಎಂದು ಹೇಳಿದರು.

# ಹರಿಹರ : ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳ ಸದ್ಬಳಕೆ ಮಾಡಿಕೊಳ್ಳಲು ಕರೆ



**ಸುಜ್ಞಾನ ನಿಧಿ ಶಿಷ್ಯ ವೇತನ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್**

ಹರಿಹರ,ಸೆ.11 - ವಿದ್ಯಾರ್ಥಿಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳ ಸದ್ಬಳಕೆ ಮಾಡಿಕೊಂಡು, ಮುಂದೆ ಸಮಾಜದಲ್ಲಿ ಗಣ್ಯ ವ್ಯಕ್ತಿಗಳಾಗಿ ಇತರರಿಗೆ ಒಳಿತನ್ನು ಮಾಡುವಂತಾಗಲಿ ಎಂದು ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್ ಹೇಳಿದರು.

ನಗರದ ಬಿರ್ಲಾ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ನಿಂದ ಮೊನ್ನೆ ಆಯೋಜಿಸಲಾಗಿದ್ದ, ಸುಜ್ಞಾನ ನಿಧಿ ಶಿಷ್ಯ ವೇತನ ಮಂಜೂರಾತಿ ಪತ್ರ ವಿತರಣೆ, ಹಾಗೂ ಪತ್ರಕರ್ತರಿಗೆ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಧರ್ಮಸ್ಥಳ ಸಂಸ್ಥೆಯಿಂದ ಸುಜ್ಞಾನ ನಿಧಿ ಶಿಷ್ಯವೇತನ ಮಂಜೂರಾತಿ ಪಡೆದುಕೊಂಡಿದ್ದೀರಿ. ಅದನ್ನು ಪಡೆಯುವುದರ ಹಿಂದೆ, ಬಹಳಷ್ಟು ಜನರ ಶ್ರಮದ ಫಲ ಇದೆ. ದುರುಪಯೋಗ ಮಾಡಿಕೊಳ್ಳದೇ ಸದ್ಬಳಕೆ ಮಾಡಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಮತ್ತು ಸದೃಢವಾಗುತ್ತದೆ ಎಂದರು.

ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಸಮುದಾಯ ಭವನದ ಕಟ್ಟಡಗಳು, ಶೌಚಾಲಯ, ಮಹಿಳೆಯರಿಗೆ ಸ್ವಾವಲಂಬಿ ಜೀವನಕ್ಕೆ ಬೇಕಾದ ಯೋಜನೆಗಳನ್ನು ರೂಪಿಸುವುದಲ್ಲದೆ, ಗೋ ಸಂರಕ್ಷಣೆ, ಗೋಶಾಲೆ ತೆರೆಯುವ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಯೋಜನೆಯ ಜಿಲ್ಲಾ ನಿರ್ದೇಶಕ ಎಂ. ಲಕ್ಷ್ಮಣ್ ಮಾತನಾಡಿ, ಮಕ್ಕಳು ಉತ್ತಮ ಹಾಗೂ ತಾಂತ್ರಿಕ ಶಿಕ್ಷಣ ಪಡೆಯುವುದಕ್ಕಾಗಿ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆಯವರು ಸುಜ್ಞಾನನಿಧಿ ಶಿಷ್ಯವೇತನ ನೀಡುತ್ತಿದ್ದು, ಹರಿಹರ ತಾಲ್ಲೂಕಿನಾದ್ಯಂತ, ಆರ್ಥಿಕ ವರ್ಷದಲ್ಲಿ 152 ವಿದ್ಯಾರ್ಥಿಗಳಿಗೆ ಮತ್ತು ಇಲ್ಲಿಯವರೆಗೂ 281 ವಿದ್ಯಾರ್ಥಿಗಳಿಗೆ 30 ಲಕ್ಷದ 76 ಸಾವಿರ ರೂ. ಶಿಷ್ಯವೇತನ ನೀಡಲಾಗಿದೆ. ಒಟ್ಟು ರಾಜ್ಯದಾದ್ಯಂತ 97 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ 114.50 ಕೋಟಿ ರೂ, ಮೊತ್ತದ ಶಿಷ್ಯವೇತನ ನೀಡಲಾಗಿದೆ ಎಂದು ತಿಳಿಸಿದರು.

ಪಿಎಸ್‌ಐ ಶ್ರೀಪತಿ ಗಿನ್ನಿ ಮಾತನಾಡಿ, ಇಂಜಿನಿಯರಿಂಗ್, ಡಿಪ್ಲೋಮಾ ಮತ್ತು ಐಟಿಐ ನಂತಹ ಕೋರ್ಸ್ ಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಈ ಯೋಜನೆ ಅತ್ಯಂತ ಅವಶ್ಯಕವಾಗಿದೆ. ಎಲ್ಲಾ ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಇಂದಿನ ವಿದ್ಯಾರ್ಥಿ ಯುವಜನರು ಮಾದಕ ವ್ಯಸನಿಗಳಾಗುತ್ತಿರುವುದು ಹೆಚ್ಚಾಗುತ್ತಿದೆ. ಮದ್ಯಪಾನ, ಧೂಮಪಾನ ಜೊತೆಗೆ ಮಾದಕ ದ್ರವ್ಯಗಳ ಬಳಕೆಯಿಂದ ತಮ್ಮ ಅಮೂಲ್ಯವಾದ ವಿದ್ಯಾರ್ಥಿ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಯಾವುದೇ ರೀತಿಯ ದುಶ್ಚಟಗಳಿಗೆ ಬಲಿಯಾಗದೆ, ತಮ್ಮ ತಂದೆ- ತಾಯಿಗಳಿಗೆ ಸಂಕಷ್ಟವನ್ನು ನೀಡದೆ, ಚೆನ್ನಾಗಿ ಅಭ್ಯಾಸ ಮಾಡಿ ಒಳ್ಳೆಯ ಉನ್ನತ ಹುದ್ದೆ ಗಳಿಸಿಕೊಳ್ಳಿ ಎಂದು ಸಲಹೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ಬಿ.ಆನಂದ್ ಕುಮಾರ್ ಮಾತನಾಡಿ, ರಾಜ್ಯದಲ್ಲಿಯೇ ಅತ್ಯಂತ ಚಟುವಟಿಕೆಯುಳ್ಳ ಏಕೈಕ ಸಂಘ ಎಂದರೆ ಅದು ಧರ್ಮಸ್ಥಳ ಸಂಸ್ಥೆಯಾಗಿದೆ.

ಪರಿಸರ ರಕ್ಷಣೆ, ಉದ್ಯೋಗ, ಶಿಕ್ಷಣ, ದೇವಾಲಯಗಳ ಜೀರ್ಣೋದ್ಧಾರ, ಮುಂತಾದ ಹಲವಾರು ಕಾರ್ಯಕ್ರಮ ಗಳನ್ನು ನಡೆಸಿಕೊಂಡು ಬರುತ್ತಿದ್ದರೂ ಸಹ ಸರ್ಕಾರದ ಯಾವುದೇ ಅನುದಾನವನ್ನು ಬಯಸದೇ ತನ್ನದೇ ಆದ ಸ್ವಂತಿಕೆಯನ್ನು ಉಳಿಸಿಕೊಂಡಿದೆ ಎಂದು ಹೇಳಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಎಚ್.ಪಿ.ಬಸವರಾಜ್ (ಬಾಬಣ್ಣ) ಮಾತನಾಡಿ, ಧರ್ಮಸ್ಥಳ ಸಂಸ್ಥೆಯ ಕಾರ್ಯವೈಖರಿ ದೇಶದ ಅನ್ಯ ರಾಜ್ಯ ಮತ್ತು ವಿದೇಶದಲ್ಲಿರುವ ಸಂಸ್ಥೆಗಳಿಗೆ ಅನುಕರಣೆ ಮಾಡುವ ನಿಟ್ಟಿನಲ್ಲಿ ಬೆಳೆದು ನಿಂತಿದೆ ಎಂದರು.

ಬಿಇಓ ಡಿ. ದುರುಗಪ್ಪ, ನಾರಾಯಣ ಆಶ್ರಮದ ಗುರೂಜಿಗಳು, ಪತ್ರಕರ್ತರ ಸಂಘದ ಅಧ್ಯಕ್ಷೆ ಶಾಂಭವಿ ನಾಗರಾಜ್ ಮುಂತಾದವರು ಮಾತನಾಡಿದರು.

ಶ್ರೀ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಬಿ.ಸಿ. ಟ್ರಸ್ಟ್ ನ ತಾಲ್ಲೂಕು ಯೋಜನಾಧಿಕಾರಿ ನಂದಿನಿ ಶೇಟ್, ಪದ್ಮರಾಜ್ ಜೈನ್, ಜನಜಾಗೃತಿ ವೇದಿಕೆ ಸದಸ್ಯ ರಾಜಶೇಖರ್ ಕೊಂಡಜ್ಜಿ, ಮಾರುತಿ ಬೇಡರ್, ಭಾರತಿ ಒಂಟೆಗೌಡ್ರು, ಶ್ವೇತಾ, ಜಯಲಕ್ಷ್ಮಿ, ವಿಠಲ್, ನಿಂಗರಾಜ್, ದೇವರಾಜ್, ಸುಶೀಲಾ, ಗೀತಾ, ತನುಜಾ, ವೀರಭದ್ರ ಆಚಾರ್, ವಿವೇಕ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಇಬ್ಬರು ನಕಲಿ ವೈದ್ಯರಿಗೆ ತಲಾ ಲಕ್ಷ ರೂ.ಗಳ ದಂಡ

**(1ನೇ ಪುಟದಿಂದ)** ವಿಧಿಸಲಾಗಿದೆ. ಮತ್ತೊಬ್ಬ ನಕಲಿ ವೈದ್ಯ ಹಿರೇಕೆರೂರು ತಾಲ್ಲೂಕಿನ ಹಿರೇ ಮೊರಬ ಗ್ರಾಮದ 45 ವರ್ಷದ ಲಕ್ಷ್ಮಣ ಬಿನ್ ಫಕ್ಕೀರಪ್ಪ ಇವರು ಹೊನ್ನಾಳಿ ತಾಲ್ಲೂಕು ಕ್ಯಾಸಿನಕೆರೆ ಗ್ರಾಮದಲ್ಲಿ ದೇವಸ್ಥಾನದ ಹತ್ತಿರ ಬಸವನಗೌಡ ಎಂಬುವರಿಂದ ಮನೆ ಬಾಡಿಗೆ ಪಡೆದು ಹಲವು ವರ್ಷಗಳಿಂದ ಅನಧಿಕೃತ ಕ್ಲಿನಿಕ್ ನಡೆಸುತ್ತಾ ಬಂದಿದ್ದರು. ತಪಾಸಣೆ ವೇಳೆ ಬಿಇಎಂಎಸ್ ಪ್ರಮಾಣ ಪತ್ರ ಹೊಂದಲಾಗಿದೆ ಎಂಬ ಮಾಹಿತಿ ನೀಡಿದ್ದು ಇದು ಅಮಾನ್ಯ ಪ್ರಮಾಣ ಪತ್ರವಾಗಿರುವುದರಿಂದ ನಕಲಿ ಎಂದು ಪರಿಗಣಿಸಿ 1 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ.

ಈ ನಕಲಿ ಕ್ಲಿನಿಕ್ ಗಳ ಬಗ್ಗೆ ಹೊನ್ನಾಳಿ ಉಪ ವಿಭಾಗಾಧಿಕಾರಿ ಅಭಿಷೇಕ್ ಮತ್ತು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಿರೀಶ್ ಸ್ಥಳ ಮಹಜರು ಮಾಡಿ ಸಮಗ್ರ ವರದಿ ನೀಡಿದ್ದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ಕೆಪಿಎಂಇ ನೊಂದಣಿ ಸದಸ್ಯ ಕಾರ್ಯದರ್ಶಿ ಡಾ.ಷಣ್ಮುಖಪ್ಪ ಜಿಲ್ಲಾಧಿಕಾರಿಗಳಿಗೆ ಸಮಗ್ರ ವರದಿಯೊಂದಿಗೆ ಕ್ರಮಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ್ದರು.

# ಉದ್ಯಮಿ ಅಪಹರಣ !

**(1ನೇ ಪುಟದಿಂದ)** ಬೇಡಿಕೆ ಇಟ್ಟಿದ್ದರು ಎಂದು ಉದ್ಯಮಿ ದೂರು ಸಲ್ಲಿಸಿದ್ದರು.

1.50 ಕೋಟಿ ರೂ. ಹಣ ನೀಡಿದ ನಂತರ ನನ್ನನ್ನು ಬಿಟ್ಟಿದ್ದರು ಎಂದು ಉದ್ಯಮಿ ತಿಳಿಸಿದ್ದಾರೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಬಿ. ದಯಾನಂದ ಹೇಳಿದ್ದಾರೆ. ದೂರು ಆಧಾರದ ಮೇಲೆ ಪ್ರಕರಣ ದಾಖಲಿಸಿದ್ದೇವೆ. ಪ್ರಕರಣದ ಸೂಕ್ಷ್ಮತೆ ಗಮನಿಸಿ, ಇದನ್ನು ನಗರ ಅಪರಾಧ ದಳಕ್ಕೆ ವರ್ಗಾಯಿಸಲಾಗಿದೆ ಎಂದು ದಯಾನಂದ ಹೇಳಿದರು. ಜಿ.ಎಸ್.ಟಿ. ಅಧಿಕಾರಿಗಳು ಯಾವುದೇ ಅನುಮತಿ ಪಡೆಯದೇ ದಾಳಿ ನಡೆಸಿದ್ದರು. ಅಕ್ರಮ ಹಣ ಗಳಿಕೆಯ ಸಲುವಾಗಿ ಅವರು ಈ ರೀತಿ ಮಾಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಬಂಧಿತರಲ್ಲಿ ಇಬ್ಬರು ಸೂಪರಿಂಟೆಂಡೆಂಟ್ ಹಾಗೂ ಇಬ್ಬರು ಇನ್ಸ್‌ಪೆಕ್ಟರ್ ಹಂತದ ಅಧಿಕಾರಿಗಳಾಗಿದ್ದಾರೆ.

# ಸೆಮಿಕಂಡಕ್ಟರ್ ಕ್ರಾಂತಿ ಅಂಚಿನಲ್ಲಿದೆ : ಪ್ರಧಾನಿ

**(1ನೇ ಪುಟದಿಂದ)** ಡಿಸೈನಿಂಗ್ ವಲಯದಲ್ಲಿ ಭಾರತ ವಿಶ್ವಕ್ಕೆ ಶೇ.20ರ ಕೊಡುಗೆ ನೀಡುತ್ತಿದೆ. ಭಾರತದಲ್ಲಿ ಸೆಮಿಕಂಡಕ್ಟರ್ ವಲಯದ 85 ಸಾವಿರ ಪರಿಣಿತರು, ಇಂಜಿನಿಯರ್‌ಗಳು ಹಾಗೂ ಸಂಶೋಧನಾ ಪರಿಣಿತರಿದ್ದಾರೆ ಎಂದೂ ಪ್ರಧಾನಿ ಹೇಳಿದರು.

ಅಮೆರಿಕ ಹಾಗೂ ಚೀನಾ ನಡುವೆ ವ್ಯಾಪಾರಿ ಸಮರ ಉಂಟಾಗಿರುವ ಕಾರಣದಿಂದ ಚಿಪ್‌ಗಳ ಆಮದು ಇನ್ನಷ್ಟು ದುಬಾರಿಯಾಗುವ ಸಾಧ್ಯತೆ ಇದೆ. ಹೀಗಾಗಿ ವಿಶ್ವದಾದ್ಯಂತ ದೇಶಗಳು ದೇಶೀಯವಾಗಿ ಸೆಮಿಕಂಡಕ್ಟರ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಿವೆ. ಸ್ಮಾರ್ಟ್‌ಫೋನ್‌ಗಳಿಂದ ಹಿಡಿದು ಎಲೆಕ್ಟ್ರಿಕ್ ಕಾರು ಹಾಗೂ ಕೃತಕ ಬುದ್ಧಿವಂತಿಕೆವರೆಗೆ ಎಲ್ಲದಕ್ಕೂ ಸೆಮಿಕಂಡಕ್ಟರ್‌ಗಳೇ ಆಧಾರವಾಗಿವೆ.

ಭಾರತ ಚಿಪ್ ಉತ್ಪಾದಕರು ಹಾಗೂ ಪೂರೈಕೆದಾರರನ್ನು ಸೆಳೆಯಲು 76 ಸಾವಿರ ಕೋಟಿ ರೂ.ಗಳ ಯೋಜನೆ ರೂಪಿಸಿದೆ. ಇದರಿಂದ ಚಿಪ್ ಅಗತ್ಯಕ್ಕಾಗಿ ತೈವಾನ್ ರೀತಿಯ ದೇಶಗಳನ್ನು ಅವಲಂಬಿಸುವುದು ಕಡಿಮೆಯಾಗುವ ನಿರೀಕ್ಷೆ ಇದೆ.

ಈ ಯೋಜನೆಯು ಸುಮಾರು 1.5 ಲಕ್ಷ ಕೋಟಿ ರೂ.ಗಳ ಹೂಡಿಕೆಯನ್ನು ಸೆಳೆದಿದೆ. ಇದರಿಂದ ಪ್ರತಿದಿನ 70 ದಶಲಕ್ಷ ಚಿಪ್‌ಗಳ ಉತ್ಪಾದನೆ ಸಾಧ್ಯವಾಗಲಿದೆ.

ಗುಜರಾತ್‌ನ ಧೋಲೆರಾದಲ್ಲಿ 91,526 ಕೋಟಿ ರೂ.ಗಳ ಚಿಪ್ ಘಟಕ ಸ್ಥಾಪಿಸಲು ತೈವಾನ್‌ನ ಪವರ್ ಚಿಪ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಜೊತೆ ಟಾಟಾ ಒಪ್ಪಂದ ಮಾಡಿಕೊಂಡಿದೆ. ಇದು ದೇಶದ ಮೊದಲ ಚಿಪ್ ಉತ್ಪಾದನಾ ಘಟಕವಾಗಲಿದೆ. ಅಸ್ಸಾಂನಲ್ಲಿ ಟಾಟಾ ಸೆಮಿಕಂಡಕ್ಟರ್ 27,120 ಕೋಟಿ ರೂ.ಗಳ ಹೂಡಿಕೆ ಮಾಡಿದೆ.

ಅಮೆರಿಕದ ಮೈಕ್ರಾನ್ ಟೆಕ್ನಾಲಜಿ ಕಂಪನಿಯು ಗುಜರಾತ್‌ನಲ್ಲಿ 22,156 ಕೋಟಿ ರೂಗಳ ಘಟಕ ಸ್ಥಾಪಿಸಿದೆ. ಮಹಾರಾಷ್ಟ್ರದಲ್ಲಿ ಅದಾನಿ ಸಮೂಹವು ಇಸ್ರೇಲ್‌ನ ಟವರ್ ಸೆಮಿಕಂಡಕ್ಟರ್ ಜೊತೆಗೂಡಿ 83,947 ಕೋಟಿ ರೂ.ಗಳ ಘಟಕ ಸ್ಥಾಪಿಸುತ್ತಿದೆ.

ಸಿ.ಜಿ. ಪವರ್ ಕಂಪನಿಯು ಜಪಾನ್‌ನ ರೆನೆಸಾಸ್ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಹಾಗೂ ಥೈಲ್ಯಾಂಡ್‌ನ ಸ್ಟಾರ್ಸ್ ಮೈಕ್ರೋಎಲೆಕ್ಟ್ರಾನಿಕ್ಸ್ ಜೊತೆಗೂಡಿ ಗುಜರಾತ್‌ನಲ್ಲಿ ಚಿಪ್ ಪ್ಯಾಕೇಜಿಂಗ್ ಘಟಕ ಸ್ಥಾಪಿಸುತ್ತಿದೆ.

# ಪೌರ ಕಾರ್ಮಿಕರ ಮಕ್ಕಳೂ ಅಧಿಕಾರಿಗಳಾಗಲಿ

**(1ನೇ ಪುಟದಿಂದ)** ಮಾತನಾಡುತ್ತಾ, ಯಾವುದೇ ಸರ್ಕಾರವಿದ್ದರೂ ಸಾಕ್ಷರತೆಗೆ ಮಹತ್ವ ನೀಡುತ್ತದೆ. ಅದಕ್ಕಾಗಿ ಹಲವು ಯೋಜನೆಗಳನ್ನೂ ಜಾರಿಗೆ ತರುತ್ತದೆ. ಇದನ್ನು ಉಪಯೋಗಿಸಿಕೊಂಡು ಪೌರ ಕಾರ್ಮಿಕರೂ ಸಹ ಸಾಕ್ಷರರಾಗಬೇಕು ಎಂದರು.

ನಿಮ್ಮ ಮಕ್ಕಳು ನಿಮ್ಮಂತೆ ಪೌರ ಕಾರ್ಮಿಕರಾಗುವುದಕ್ಕಿಂತ ಉನ್ನತ ಹುದ್ದೆಗಳನ್ನು ಪಡೆಯುವಂತಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ಸಾಕ್ಷರತೆ ಕುರಿತು ನಡೆದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಾಕ್ಷರತಾ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷರ ಸೇನಾನಿಗಳಾದ ಹೆಗ್ಗೆರೆ ರಂಗಪ್ಪ, ಐರಣಿ ಚಂದ್ರು ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಇಲಾಖೆ, ಶಾಲಾ ಶಿಕ್ಷಣ, ಡಯಟ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಚೇರಿ ಹಾಗೂ ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೂ ಮುನ್ನ ಮಹಾನಗರ ಪಾಲಿಕೆ ಮೇಯರ್ ಬಿ.ಹೆಚ್. ವಿನಾಯಕ್ ಧ್ವಜಾರೋಹಣ ನೆರವೇರಿಸಿದ್ದರು.

ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಬಿ. ಇಟ್ನಾಳ್ ಅಧ್ಯಕ್ಷತೆ ವಹಿಸಿದ್ದರು.

ಪಾಲಿಕೆ ಸದಸ್ಯ ಎ.ನಾಗರಾಜ್, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪ ನಿರ್ದೇಶಕಿ ಗೀತಾ ಎಸ್., ಪಾಲಿಕೆ ಆರೋಗ್ಯಾಧಿಕಾರಿ ಚಂದ್ರಮೋಹನ್, ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ವಾಗೀಶ್ ಮಲ್ಕಿ ಒಡೆಯರ್, ಕೆ.ಸಿ. ಬಸವರಾಜ್, ಗುರುಸಿದ್ಧ ಸ್ವಾಮಿ ಇತರರು ಉಪಸ್ಥಿತರಿದ್ದರು. ಆವರಗೊಳ್ಳದ ಸಹ ಶಿಕ್ಷಕ ವಾಗೀಶ್ ಮಲ್ಕಿ ಒಡೆಯರ್ ಸ್ವಾಗತಿಸಿದರು.

### 259 ಗ್ರಾ.ಪಂ. ಸದಸ್ಯರು ಅನಕ್ಷರಸ್ಥರು: ಸಿಇಒ

**(1ನೇ ಪುಟದಿಂದ)** ತರಬೇತಿ ನೀಡಲಾಗುತ್ತಿದೆ. ಮುಂದಿನ ಮೂರು ತಿಂಗಳ ಅವಧಿಯಲ್ಲಿ ತರಬೇತಿ ನೀಡಿ ಸಾಕ್ಷರತಾ ಪರೀಕ್ಷೆ ಮಾಡಲಾಗುತ್ತದೆ, ಈ ಪರೀಕ್ಷೆ ಪಾಸಾದವರಿಗೆ ಸಾಕ್ಷರಸ್ಥರು ಎಂದು ಘೋಷಣೆ ಮಾಡಿ ಪ್ರಮಾಣ ಪತ್ರ ನೀಡಲಾಗುತ್ತದೆ ಎಂದು ತಿಳಿಸಿದರು. ಗ್ರಾಮ ಪಂಚಾಯ್ತಿಗಳಲ್ಲೂ 259 ಸದಸ್ಯರು ಅನಕ್ಷರಸ್ಥರಿದ್ದಾರೆ. ಅವರಿಗೂ ಕಲಿಸುವ ಮೂಲಕ ತರಬೇತಿಯನ್ನು ನೀಡುತ್ತಿದ್ದೇವೆ ಎಂದು ತಿಳಿಸಿದರು.

# ಮುಡಾ ಪ್ರಕರಣ : ಇಂದು ಸಿಎಂ ಅರ್ಜಿ ವಿಚಾರಣೆ

**(1ನೇ ಪುಟದಿಂದ)** ಕೈಗೆತ್ತಿಕೊಳ್ಳಲಿದೆ. ಪ್ರಕರಣಕ್ಕೆ ಸಂಬಂಧಿಸಿ ದಂತೆ ನ್ಯಾ.ಎಂ. ನಾಗಪ್ರಸನ್ನ ಅವರ ಪೀಠ ಈಗಾಗಲೇ ವಿಚಾರಣೆಗೆ ಸಂಬಂಧಿಸಿದ ವಾದ – ಪ್ರತಿವಾದ ಆಲಿಸಿದ್ದು, ನಾಳೆ ಅಂತಿಮ ಘಟ್ಟಕ್ಕೆ ಬರುವ ಸಾಧ್ಯತೆ ಇದೆ.

ನ್ಯಾಯಮೂರ್ತಿಗಳು ಈಗಾಗಲೇ ಸೆ.12ಕ್ಕೆ ವಾದ-ಪ್ರತಿವಾದ ಮುಗಿಯಬೇಕು ಎಂದು ಮೌಖಿಕ ಸೂಚನೆ ನೀಡಿದ್ದಾರೆ. ಈ ಆದೇಶದ ಬೆನ್ನಲ್ಲೇ ಮುಖ್ಯಮಂತ್ರಿ ಅವರ ಪರ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಅಭಿಷೇಕ್ ಮನು ಸಿಂಘ್ವಿ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ರವಿವರ್ಮ ಕುಮಾರ್ ತಮ್ಮ ವಾದ ಮುಂದುವರೆಸಲಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕೆಲಸಕ್ಕೆ ಬೇಕಾಗಿದ್ದಾರೆ**
Petrol Bunk ನಲ್ಲಿ ಕೆಲಸ ಮಾಡಲು Day & Night Shift ನಲ್ಲಿ ಅನುಭವವುಳ್ಳವರು ಮತ್ತು ಹೊಸದಾಗಿ ಸೇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94807 77338, 94821 09492

ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
**ಅಡಿಕೆ ಸಸಿಗಳು ಮಾರಾಟಕ್ಕಿವೆ**
ಸಂಪರ್ಕಿಸಿ:
98807 11151

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ಮಹಿಳಾ ಪಿ.ಜಿ.ಗೆ ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಲಿಂಗಾಯತರು
76764 61686

**ಮನೆ ಬಾಡಿಗೆಗಿದೆ**
#174/A, 3ನೇ ಮೇನ್, 6ನೇ ಕ್ರಾಸ್, ಸಿ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ. 2 ಬೆಡ್ ರೂಂ, ಪಾಲಿಕೆ ಮತ್ತು ಬೋರ್ ನೀರಿನ ಸೌಲಭ್ಯವಿದೆ.
98442 15950

**ಸೈಟು ಮಾರಾಟಕ್ಕಿದೆ**
ದಾವಣಗೆರೆ ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ ಒಂದಾದ ತುಂಗಭದ್ರಾ ಬಡಾವಣೆ (KHB) ಬಡಾವಣೆ ಸೈಟ್ ನಂಬರ್ 1882, ಅಳತೆ 9x12 ಮೀಟರ್ (LIG ಸೈಟ್) ಬನ್ನಿಕೋಡು ರಸ್ತೆ, ಪಕ್ಕದಲ್ಲಿ ಇದೆ. ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ.
98451 65062

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು Sales Girls ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 1

**ಬೇಕಾಗಿದ್ದಾರೆ**
ನಮ್ಮ ಪೇಂಟ್ ಮತ್ತು ಹಾರ್ಡ್‌ವೇರ್ಸ್ ಅಂಗಡಿಯಲ್ಲಿ ಸೇಲ್ಸ್ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ತಂದೂರಿ ಮತ್ತು ಚೈನೀಸ್ ಆರ್ಡರ್ ಭಟ್ಟರು ಬೇಕಾಗಿದ್ದಾರೆ
BIET ರೋಡ್, ಹೇಮಾವತಿ ಹಾಸ್ಟೆಲ್ ಪಕ್ಕ, ಆಂಜನೇಯ ಬಡಾವಣೆ, ದಾವಣಗೆರೆ.
63615 88497, 79756 19960

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

Sri Nidhi trust (R)
**B.O.S.S.E**
10th & PUC (Arts, Commerce, Science)
ನೇರ ಪರೀಕ್ಷೆಗಳು
• ಸರ್ಕಾರಿ ನೌಕರರಿಗೆ ಬರುತ್ತೆ
• ಮುಂದಿನ ವಿದ್ಯಾಭ್ಯಾಸ ಮಾಡಬಹುದು.
• D-Pharma, B.Sc Nursing ಮಾಡಬಹುದು
WANTED RECEPTIONSIT ( LADIES )
77609 55550

**ಕೃಷಿ ಟಾರ್ಪಾಲಿನ್**
ಹನಗವಾಡಿ ಕೈಗಾರಿಕಾ ಪ್ರದೇಶ NH4, ಹರಿಹರ.
ವಿಶೇಷ ಪ್ರಾರಂಭಿಕ ದರ KG ಗೆ
HDPE ISO Black Rs. 130/-
HDPE ISI Black Rs. 250/-
91082 11555

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಬಾಡಿಗೆಗೆ ಇದೆ**
ಹಾಸ್ಟೆಲ್/ಪಿಜಿ ಮಾಡಲು ಅನುಕೂಲವಿರುವ ಬಿಲ್ಡಿಂಗ್ ಬಾಡಿಗೆಗೆ ಇದೆ.
ಆಂಜನೇಯ ಬಡಾವಣೆ, 15ನೇ ಕ್ರಾಸ್, ಮೋರ್ ಹತ್ತಿರ, ದಾವಣಗೆರೆ.
6361714324, 7676209945

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**SITE FOR SALE**
30x65 in Banashankari Layout-DVG, Site No.1 behind Sambhrama Hotel West facing.
88840 06061,72597 35123

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**2 BHK House for Rent**
1st floor, Kirwadi Layout, 4th main Road Near, Montessori Convent, Davangere-2.
99010 33555, 99457 13192

**ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ**
ಕನಿಷ್ಠ- 2-3 ವರ್ಷ ಅನುಭವವುಳ್ಳವರು ಮದುವೆಯಾದವರಿಗೆ ಮಾತ್ರ.
ಸಂಬಳ +ಇನ್‌ಸೆಂಟಿವ್ +ESI & PF
ಶ್ರೀನಿವಾಸ ಹೋಂಡಾ
ಹದಡಿ ಮೇನ್ ರೋಡ್, ದಾವಣಗೆರೆ.
70269 49724, 99166 31266

**ERA GROUP OF COMPANIES**
CALL CENTRE
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies,
Qualification : SSLC to Degree,
Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ಮನೆ ಬಾಡಿಗೆಗೆ ಇದೆ**
1 BHK, ಗ್ರೌಂಡ್ ಫ್ಲೋರ್
# 3893, 1ನೇ ಕ್ರಾಸ್, ವಿದ್ಯಾನಗರ
ಕೆನರಾ ಬ್ಯಾಂಕ್ ಎದುರು, ದಾವಣಗೆರೆ.
98802 10699

**WANTED TECHARES**
B.Sc, B.Ed - 2 (maths)
B.Sc / B.Com - 2
Peon (ಆಯಾ) - 1
SRP Convent
Anjaneya Badavane, 17th Cross, Dvg - 04
95903 99449, 91136 31266, 77954 41369

**ಮದ್ಯಪಾನ ಬಿಡಬೇಕೆ ?**

ಉಬ್ಬಸ ರೋಗ, ಕಾಲು ನೋವು, ಅಲರ್ಜಿ, ಮಧುಮೇಹ, ವೈಟ್‌ಗ್ಗೆನ್ ಮತ್ತು ವೈಟ್ ಲಾಸ್, ಗ್ಯಾಸ್ಟ್ರಿಕ್ ಇತ್ಯಾದಿಗಳಿಗೆ ನಮ್ಮನ್ನು ಸಂಪರ್ಕಿಸಿ.
ಪ್ರತಿ ತಿಂಗಳು 12 ಮತ್ತು 13 ರಂದು
ವಿಳಾಸ : ಶ್ರೀ ಲಾಡ್ಜ್,
ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ.
ಡಾ|| ಶರ್ಮ
ಸಮಯ : ಬೆ. 10 ರಿಂದ ಮಧ್ಯಾಹ್ನ 3
98869 40831

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CHANGE OF NAME**
I Timmappa B.R S/o Ramanna V. (Old Name) R/o Jammapura, Thoranagatte Post, Jagaluru Taluk, Davanagere Dist-577521, karnataka State, India. I have changed my name as Thimmappa B.R (New Name) Vide affidavit on 9.9.2024 sworn before Notary B.G Revanasiddappa, Davanagere. In th Future all my dealings transactions will be in my new name.
Sd/- Thimmappa B.R

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**JOB VACANCY AVAILABLE**
Near Lakshmi Floor Mills, Office work and field work. Contact -
94483 41142

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. (Only for Veg)
Vidyanagar last city bus stop, Davangere
8951938228, 8050222181

**ಶ್ರೀ ಸಾಯಿ ಫೈನಾನ್ಸ್ (ರಿ)**
ಫುಲ್ ಟೈಂ/ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ :
96860 22969

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

## ಪ್ರಥಮ ಚಿಕಿತ್ಸೆ ಕಿಟ್ ವಿತರಿಸಿದ ಶ್ರೀಕಾಂತ್



ದಾವಣಗೆರೆ, ಸೆ.11- ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಅವರು ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ದಕ್ಷಿಣ ಸಂಚಾರಿ ಪೊಲೀಸ್ ಸಿಬ್ಬಂದಿಗಳಿಗೆ ಪ್ರಥಮ ಚಿಕಿತ್ಸಾ ಕಿಟ್‌ಗಳನ್ನು ನೀಡಿದರು.

ಈ ಕಿಟ್‌ನಲ್ಲಿ, ಅಪಘಾತವಾದಾಗ ಪ್ರಥಮ ಚಿಕಿತ್ಸೆಗೆ ಬೇಕಾಗುವ ಕಾಟನ್, ಪೌಡರ್, ಬ್ಯಾಂಡೇಜ್, ಹ್ಯಾಂಡಿ ಪ್ಲಾಸ್ಟ್ ಇರುತ್ತದೆ. ನಗರದಲ್ಲಿ ಕೆಲವು ಕಡೆ ಸಣ್ಣ ಸಣ್ಣ ಅಪಘಾತಗಳಾದ ಸಂದರ್ಭದಲ್ಲಿ ತಕ್ಷಣವೇ ಪ್ರಥಮ ಚಿಕಿತ್ಸೆ ಅಗತ್ಯವಿರುತ್ತದೆ. ರಕ್ತ ಸೋರಿಕೆ ತಡೆಗಟ್ಟಬಹುದು. ಎಲ್ಲಾ ವಾಹನಗಳಲ್ಲಿ ಪ್ರಥಮ ಚಿಕಿತ್ಸಾ ಕಿಟ್ ಇರಬೇಕು. ದಕ್ಷಿಣ ಸಂಚಾರಿ ಪಿ.ಎಸ್.ಐ ಶೈಲಾಜಾ, ಸಿಬ್ಬಂದಿಗಳಾದ ನದಾಫ್, ಬಸವರಾಜ್, ಮಹಂತೇಶ್ ದೊಡ್ಡಮನಿ ಹಾಗೂ ಪ್ರವೀಣ್ ಸಿ. ಇ ಬಸವರಾಜ್ ಇದ್ದರು.

## ಕೃಷಿ ಡಿಪ್ಲೋಮಾ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ದಾವಣಗೆರೆ, ಸೆ.11- 2024-25ನೇ ಶೈಕ್ಷಣಿಕ ಸಾಲಿನ ಉಡುಪಿ ಜಿಲ್ಲೆಯ ಬ್ರಹ್ಮಾವರದ ಕೃಷಿ ಡಿಪ್ಲೋಮಾ ದಾಖಲಾತಿಗೆ ಅರ್ಜಿ ಸಲ್ಲಿಕೆಯ ಅಂತಿಮ ದಿನಾಂಕವನ್ನು ಇದೇ ದಿನಾಂಕ 14ರ ವರೆಗೆ ವಿಸ್ತರಿಸಲಾಗಿದೆ.

# ತಂತ್ರಜ್ಞಾನ, ಸುಸ್ಥಿರತೆ ಅಳವಡಿಕೆಯಿಂದ ವಿಮೆ, ಬ್ಯಾಂಕಿಂಗ್ ಸುಭದ್ರ

### ದಾವಣಗೆರೆ ವಿಶ್ವವಿದ್ಯಾನಿಲಯದ ಕಾರ್ಯಕ್ರಮದಲ್ಲಿ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ್



ದಾವಣಗೆರೆ, ಸೆ. 11 - ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳಲ್ಲಿ ಸುಸ್ಥಿರ ಅಭ್ಯಾಸ ಗಳನ್ನು ಸಂಯೋಜಿಸುವ ಮಾರ್ಗವು ಹಲವಾರು ಅಡಚಣೆಗಳಿಂದ ತುಂಬಿದ್ದರೂ, ಉತ್ತಮ ಅವಕಾಶಗಳ ಸಾಮರ್ಥ್ಯವು ಅಪಾರವಾಗಿದೆ. ನಾವೀನ್ಯತೆಯನ್ನು ಅಳವಡಿಸಿಕೊಳ್ಳುವುದರಲ್ಲಿ ಯಶಸ್ಸು ಅಡಗಿದೆ ಎಂದು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ .ಸಿ.ಎಂ. ತ್ಯಾಗರಾಜ್ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯವಹಾರ ನಿರ್ವಹಣೆ ವಿಭಾಗದ ವತಿಯಿಂದ ಮಂಗಳವಾರ ಏರ್ಪಡಿಸಿದ್ದ 'ಬ್ಯಾಂಕಿಂಗ್ ಮತ್ತು ವಿಮಾ ವಲಯದಲ್ಲಿ ಸುಸ್ಥಿರತೆ ಮತ್ತು ತಂತ್ರಜ್ಞಾನ: ಸವಾಲುಗಳು ಮತ್ತು ಅವಕಾಶಗಳು' ಕುರಿತ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸುಸ್ಥಿರ ಹಣಕಾಸಿನ ಭವಿಷ್ಯದಲ್ಲಿ ಪರಿಸರ, ಸಾಮಾಜಿಕ ಮತ್ತು ಆಡಳಿತದ ಜವಾಬ್ದಾರಿ ನಿರ್ವಹಣೆಯಲ್ಲಿ ಕೈಗೊಳ್ಳುವ ನಿರ್ಧಾರಗಳು ಮುಖ್ಯವಾಗಿವೆ. ಡಿಜಿಟಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್ ಮತ್ತಿತರೆ ತಾಂತ್ರಿಕತೆಗಳು, ಬ್ಯಾಂಕ್‌ಗಳು ಮತ್ತು ವಿಮಾದಾರರು ಸಮರ್ಥವಾಗಿ ಸೇವೆ ಒದಗಿಸಲು ಅವಕಾಶ ಮಾಡಿಕೊಡುತ್ತದೆ. ಹೊಸ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡಲು ಸಹಕಾರಿಯಾಗಿವೆ. ಅವುಗಳ ಸದ್ಬಳಕೆಯೂ ಮುಖ್ಯ ಎಂದು ತಿಳಿಸಿದದರು.

ತಂತ್ರಜ್ಞಾನವು ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳಲ್ಲಿನ ಅನೇಕ ಆವಿಷ್ಕಾರಗಳ ಹಿಂದಿನ ಚಾಲನಾ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಇವುಗಳ ಬೆಳವಣಿಗೆಯ ವೇಗಕ್ಕೆ ತಕ್ಕಂತೆ ಸುಸ್ಥಿರತೆಯ ಕಾಳಜಿಯೂ ಮುಖ್ಯ ಆದ್ಯತೆ ಆಗಬೇಕಾಗಿದೆ. ಬೆಳವಣಿಗೆಯ ಅವಕಾಶಗಳ ಜೊತೆಗೆ ಹೊಸ ಸವಾಲುಗಳು ಎದುರಾಗುತ್ತಿವೆ. ಅವುಗಳನ್ನು ನಿರ್ವಹಿಸುವ ಕೌಶಲ್ಯವೂ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಬ್ಯಾಂಕಿಂಗ್ ಮತ್ತು ವಿಮಾ ಕಂಪನಿಗಳು ಡಿಜಿಟಲ್ ತಂತ್ರಜ್ಞಾನಗಳ ಮೇಲೆ ಅವಲಂಬನೆಯನ್ನು ಹೆಚ್ಚಿಸುವುದರಿಂದ, ಸೈಬರ್ ಟಾಕ್‌ಗಳು ಮತ್ತು ಡೇಟಾ ಉಲ್ಲಂಘನೆಗಳ ಅಪಾಯವು ಹೆಚ್ಚು ಸ್ಪಷ್ಟವಾಗುತ್ತದೆ. ಸೂಕ್ಷ್ಮ ಗ್ರಾಹಕ ಡೇಟಾವನ್ನು ರಕ್ಷಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುವುದು ಅತಿ ಮುಖ್ಯವಾಗಿದೆ.

ತಂತ್ರಜ್ಞಾನದ ಕ್ಷಿಪ್ರವಾಗಿ ವಿಕಸನಗೊಳ್ಳುತ್ತಿರುವ ಕಾರಣ ನಿಯಂತ್ರಕ ಚೌಕಟ್ಟುಗಳನ್ನು ಮೀರಿಸುತ್ತದೆ, ಹಣಕಾಸು ಸಂಸ್ಥೆಗಳಿಗೆ ಅನಿಶ್ಚಿತತೆಯನ್ನು ಸೃಷ್ಟಿಸುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಮಾತನಾಡಿ, ಮೊಬೈಲ್ ಬ್ಯಾಂಕಿಂಗ್, ಡಿಜಿಟಲ್ ವ್ಯಾಲೆಟ್‌ಗಳು ಮತ್ತು ಆನ್‌ಲೈನ್ ವೇದಿಕೆಗಳಿಂದಾಗಿ ಬ್ಯಾಂಕುಗಳು ಭೌತಿಕ ಶಾಖೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿವೆ. ಹೀಗಾಗಿ ಶಕ್ತಿಯ ಬಳಕೆ ಕಡಿಮೆಗುತ್ತಿದೆ ಎಂದು ಹೇಳಿದರು.

ಬ್ಲಾಕ್‌ಚೈನ್ ತಂತ್ರಜ್ಞಾನವು ಅದರ ವಿಕೇಂದ್ರೀಕೃತ ಮತ್ತು ಬದಲಾಗದ ಸ್ವಭಾವದೊಂದಿಗೆ, ಬ್ಯಾಂಕಿಂಗ್ ಮತ್ತು ವಿಮಾ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಸಾಧ್ಯವಾಗಿದೆ. ಹೆಚ್ಚು ವೇಗವಾಗಿ ಸೇವೆ ಒದಗಿಸಲು ನೆರವಾಗುತ್ತಿದೆ ಎಂದು ತಿಳಿಸಿದರು.

ಬೆಳಗಾವಿ ವಿಶ್ವವಿದ್ಯಾಲಯದ ಪ್ರೊ. ಎಸ್.ಸಿ. ಪಾಟೀಲ ವಿಶೇಷ ಉಪನ್ಯಾಸ ನೀಡಿದರು. ಕುಲಸಚಿವ ಮತ್ತು ವಿಭಾಗದ ಅಧ್ಯಕ್ಷ ಪ್ರೊ. ಆರ್. ಶಶಿಧರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರೀಕ್ಷಾಂಗ ಕುಲಸಚಿವ ಪ್ರೊ. ಸಿ.ಕೆ. ರಮೇಶ, ಪ್ರೊ. ಜೆ.ಕೆ. ರಾಜು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಯೋಜಕರಾದ ಡಾ.ಸುನಿತಾ ಆರ್. ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

## 'ಅಲ್ಕಜಾರ್'ನ ಹೊಸ ಮಾದರಿ ಕಾರು ಬಿಡುಗಡೆ




ದಾವಣಗೆರೆ, ಸೆ. 11 - ಹುಂಡೈ ಮೋಟಾರ್ ಇಂಡಿಯಾ ಕಂಪನಿಯ ಅಲ್ಕಜಾರ್‌ನ ಹೊಸ ಮಾದರಿಯ ಕಾರನ್ನು ನಗರದ ಕೆ.ಜೆ. ಹುಂಡೈ ಶೋ ರೂಂ ನಲ್ಲಿ ಕೆ.ಜೆ. ಹುಂಡೈ ಸಂಸ್ಥೆಯ ಅಧ್ಯಕ್ಷ ಕೆ. ಜಾವೀದ್ ಸಾಬ್ ಅವರು ಮಾರುಕಟ್ಟೆಗೆ ಪರಿಚಯಿಸಿದರು.

ಸಮಾರಂಭದಲ್ಲಿ ಮಾತನಾಡಿದ ಕೆ.ಜೆ. ಹುಂಡೈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ.ಜೆ. ಅಫಕ್ ರಜ್ವಿ ಹುಂಡೈ ಬ್ರ್ಯಾಂಡ್‌ನ ಯಶಸ್ಸು ಮತ್ತು ಪರಂಪರೆಯ ಮೇಲೆ ಹೊಸ ವಾಹನವನ್ನು ಉತ್ಪಾದಿಸಲಾಗಿದೆ ಎಂದು ತಿಳಿಸಿದರು.

1.5 ಲೀ. ಸಾಮರ್ಥ್ಯದ ಟರ್ಬೊ ಜಿಡಿಐ ಪೆಟ್ರೋಲ್ ವಾಹನದ ಆರಂಭಿಕ ಬೆಲೆ 14.99 ಲಕ್ಷ ಇದೆ. 1.5 ಲೀ. ಸಾಮರ್ಥ್ಯದ ಯು2 ಸಿಆರ್‌ಡಿಐ ಡೀಸೆಲ್ ವಾಹನದ ಆರಂಭಿಕ ಬೆಲೆ 15.99 ಲಕ್ಷ ಇದೆ ಎಂದು ತಿಳಿಸಿದರು.

ಆರು ಹಾಗೂ ಏಳು ಆಸನಗಳ ಸಾಮರ್ಥ್ಯದಲ್ಲಿ ಈ ವಾಹನ ಲಭ್ಯವಿರಲಿದೆ. ಕ್ಯಾಬಿನ್ ಹೈಟೆಕ್ ಮತ್ತು ಆರಾಮದಾಯಕ ಅನುಭವವನ್ನು ನೀಡಲಿದೆ. ಈ ವಾಹನದಲ್ಲಿ 8 ಸ್ಪೀಕರ್ ವ್ಯವಸ್ಥೆ, ಮಳೆಯ ಸೆನ್ಸಿಂಗ್ ವೈಪರ್‌ಗಳು, ಪಾರ್ಕಿಂಗ್ ಸೆನ್ಸಾರ್, ಎಲ್‌ಇಡಿ ಹೆಡ್‌ಲ್ಯಾಂಪ್‌ಗಳು ಆರು ಏರ್ ಬ್ಯಾಗ್‌ಗಳು, 4 ಡಿಸ್ಕ್ ಬ್ರೇಕ್‌ಗಳು, 40 ಪ್ರಮಾಣಿತ ಮತ್ತು 70ಕ್ಕೂ ಹೆಚ್ಚು ಸುರಕ್ಷತಾ ವೈಶಿಷ್ಟ್ಯಗಳು ಇರಲಿವೆ. 9 ಆಕರ್ಷಕ ಬಣ್ಣಗಳಲ್ಲಿ ದೊರೆಯಲಿದ್ದು, 8 ಮೊನೊ-ಟೋನ್ ಆಯ್ಕೆ ಹೊಂದಿರಲಿದೆ ಎಂದು ಕಂಪನಿ ತಿಳಿಸಿದೆ.

ಸಂಸ್ಥೆಯ ನಿರ್ದೇಶಕ ಕೆ.ಜೆ.ಅಬ್ರಾಹರ್, ಹುಂಡೈ ಕಂಪನಿಯ ಎ.ಪಿ.ಎಸ್.ಎಂ. ಅರುಣ್, ಹುಂಡೈ ಇಂಡಿಯಾ ಇನ್ಸೂರೆನ್ಸ್ ಕಂಪನಿಯ ಅಮಿತ್, ಹುಂಡೈ ಇಂಡಿಯಾ ಇನ್ಸೂರೆನ್ಸ್ ಕಂಪನಿಯ ಕಾರ್ತಿಕ್, ಸೆಲ್ಸ್ ಮ್ಯಾನೇಜರ್ ಹಂಜಲ್ ಹಾಗೂ ಇತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

## ಆನಗೋಡಿನಲ್ಲಿ ನಾಳೆ ರೈತ ಹುತಾತ್ಮರ ಸ್ಮರಣೆ

ದಾವಣಗೆರೆ, ಸೆ.11- ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ, ದಾವಣಗೆರೆ ಜಿಲ್ಲೆಯ ರೈತಪರ ಸಂಘಟನೆಗಳ ಸಹಯೋಗದಲ್ಲಿ ನಾಡಿದ್ದು ದಿನಾಂಕ 13 ರ ಶುಕ್ರವಾರ ಮಧ್ಯಾಹ್ನ 12 ಕ್ಕೆ ಆನಗೋಡು ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬಳಿ (ಉಳುಪಿನಕಟ್ಟೆ ಕ್ರಾಸ್) ಇರುವ ರೈತ ಹುತಾತ್ಮರ ಸಮಾಧಿ ಬಳಿ ಓಬೇನಹಳ್ಳಿ ದಿ. ಕಲ್ಲಿಂಗಪ್ಪ, ಸಿದ್ಧನೂರು ದಿ. ನಾಗರಾಜಚಾರ್ ಅವರ 32 ನೇ ವರ್ಷದ ರೈತ ಹುತಾತ್ಮರ ದಿನಾಚರಣೆ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಎನ್. ಜಿ. ಪುಟ್ಟಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅತಿಥಿಗಳಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್. ಜಯದೇವನಾಯ್ಕ, ಶಾಸಕ ಕೆ. ಎಸ್.ಬಸವಂತಪ್ಪ, ಸಮಿತಿ ಗೌರವಾಧ್ಯಕ್ಷ ಆನಗೋಡು ನಂಜುಂಡಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್, ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್, ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ತೀರ್ಥೇಶ್, ತಹಶೀಲ್ದಾರ್ ಡಾ. ಎಂ.ವಿ. ಅಶ್ವತ್ಥ್, ಕಾರ್ಯಪಾಲಕ ಇಂಜಿನಿಯರ್ ಟಾಟಾ ಶಿವನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ಶಿವಮೂರ್ತಿ ಸೇರಿದಂತೆ ಇತರೆ ಗಣ್ಯರು ಆಗಮಿಸಲಿದ್ದಾರೆ.

ಶಾಮನೂರು ಹೆಚ್.ಆರ್. ಲಿಂಗರಾಜ್, ಕಕ್ಕರಗೊಳ್ಳದ ಕೆ.ಪಿ. ಕಲ್ಲಿಂಗಪ್ಪ, ಆವರಗೆರೆ ರುದ್ರಮುನಿ, ಹೆಚ್.ಎನ್. ಶಿವಕುಮಾರ್, ಮಟ್ಟಿಕಲ್ ವೀರಭದ್ರಸ್ವಾಮಿ, ತುಂಬಿಗೆರೆ ಗಂಗಾಧರಪ್ಪ, ರಾಜಶೇಖರ್, ಅಣಜಿ ಬಸವರಾಜ್, ಮೋಹನ್ ಕುಮಾರ್, ಚಟ್ಟೋಬನಹಳ್ಳಿ ಕಂಪ್ಲೇಶ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## 15 ರಂದು ರಾಜ್ಯ ಸಬ್ ಜ್ಯೂನಿಯರ್ ಬಾಲ್ ಬ್ಯಾಡ್ಮಿಂಟನ್ ಪಂದ್ಯ

ದಾವಣಗೆರೆ, ಸೆ.11- ಸಬ್ ಜೂನಿಯರ್ ರಾಜ್ಯ ಮಟ್ಟದ ಬಾಲಕ - ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳು ಇದೇ ದಿನಾಂಕ 15 ಮತ್ತು 16ರಂದು ಚಿತ್ರದುರ್ಗ ಜಿಲ್ಲಾ ಹಿರಿಯೂರಿನಲ್ಲಿ ನಡೆಯಲಿವೆ.

ವಿವರಕ್ಕೆ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಕಾರ್ಯದರ್ಶಿ ಉಮೇಶ್ ಮತ್ತು ಕುಮಾರಸ್ವಾಮಿ (944887346, 7892074741) ಅವರನ್ನು ಸಂಪರ್ಕಿಸಬಹುದು.



## ದೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ ಅವರಿಂದ ಸಾರ್ವಜನಿಕರ ಕುಂದು ಕೊರತೆ ಸ್ವೀಕಾರ

ದಾವಣಗೆರೆ, ಸೆ. 11 - ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ದೂಡಾ ಸದಸ್ಯರ ಕೊಠಡಿಯಲ್ಲಿ ಇಂದು ಸಾರ್ವಜನಿಕರ ಕುಂದು - ಕೊರತೆಗಳನ್ನು ಸ್ವೀಕರಿಸಿದರಲ್ಲದೆ, ತತ್‌ಕ್ಷಣವೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ನಾಗರಿಕರನ್ನು ಅಲೆದಾಡಿಸದೇ ತಕ್ಷಣ ಕೆಲಸಗಳನ್ನು ಮಾಡಿಕೊಡುವಂತೆ ಅವರು ನಿರ್ದೇಶಿಸಿದರು.

## ನಗರದಲ್ಲಿ ಇಂದು ಅನ್ನ ದಾಸೋಹ

ದೊಡ್ಡಪೇಟೆಯ ಶ್ರೀ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ವಿನಾಯಕ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12.30 ಕ್ಕೆ ಅಜ್ಜಂಪುರದ ಗೋವಿಂದಸ್ವಾಮಿಯವರ ಜ್ಞಾಪಕಾರ್ಥ ಅಜ್ಜಂಪುರ ಮಂಜುನಾಥ ಮತ್ತು ಮಕ್ಕಳು ದಾಸೋಹ ಸೇವೆಯನ್ನು ನೆರವೇರಿಸಲಿದ್ದಾರೆ.

## ಜಲ ವಿದ್ಯುತ್‌ಗೆ 12,461 ಕೋಟಿ ರೂ. ಒದಗಿಸಲು ನಿರ್ಧಾರ

ನವದೆಹಲಿ, ಸೆ. 11 - 31,350 ಎಂ.ಡಬ್ಲ್ಯೂ. ಸಾಮರ್ಥ್ಯದ ಜಲ ವಿದ್ಯುತ್ ಯೋಜನೆಗಳನ್ನು ಮುಂದಿನ ಎಂಟು ವರ್ಷಗಳಲ್ಲಿ ಜಾರಿಗೆ ತರಲು 12,461 ಕೋಟಿ ರೂ. ಒದಗಿಸಲು ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

# ಅಂಧಕಾರವಿದ್ದರೂ ಅಲ್ಲಲ್ಲಿ ಬೆಳಕನ್ನು ಬೀರುವ ಜ್ಯೋತಿಗಳೇ ಶಿಕ್ಷಕರು

### ಶ್ರೀ ಸತ್ಯಸಾಯಿ ಗುರುವಂದನಾ ಕಾರ್ಯಕ್ರಮದಲ್ಲಿ ಡಾ.ಪಿ.ಎಂ. ಅನುರಾಧ



ದಾವಣಗೆರೆ, ಸೆ. 11- ಖಡ್ಗಕ್ಕಿಂತ ಲೇಖನಿ ಹರಿತವಾದದ್ದು, ಶಿಕ್ಷಕರ ವೃತ್ತಿ ಬಹಳ ಶ್ರೇಷ್ಠವಾದ ವೃತ್ತಿ. ಜಗತ್ತಿನಲ್ಲಿ ಕೆಟ್ಟದ್ದು ಇದ್ದರೂ, ಅಂಧಕಾರವಿದ್ದರೂ ಅಲ್ಲಲ್ಲಿ ಬೆಳಕನ್ನು ಬೀರುವ ಜ್ಯೋತಿಗಳೇ ಶಿಕ್ಷಕರು ಎಂದು ಎವಿಕೆ ಕಾಲೇಜಿನ ವಿಶ್ರಾಂತ ಆಂಗ್ಲ ಭಾಷಾ ಪ್ರಾಧ್ಯಾಪಕರಾದ ಡಾ.ಪಿ.ಎಂ.ಅನುರಾಧ ಅವರು ವಿಶ್ಲೇಷಿಸಿದರು.

ನಗರದ ಈಶ್ವರಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಯಲ್ಲಿ ನಿನ್ನೆ ಆಯೋಜಿಸಿದ್ದ ಶ್ರೀ ಸತ್ಯಸಾಯಿ ಗುರು ವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹದಿಹರೆಯದಲ್ಲಿ ಇರುವ ಚೈತನ್ಯ, ಹುಮ್ಮಸ್ಸು, ಕ್ರಿಯಾಶೀಲತೆ, ಲವಲವಿಕೆ ಎಂತಹವರಲ್ಲೂ ಉತ್ಸಾಹ ತುಂಬುವಂತಹುದು. ಈ ವಯಸ್ಸಿನಲ್ಲಿ ಹಸಿ ಗೋಡೆಗೆ ಕಲ್ಲು ಒಗೆದರೂ ನಾಟುವಂತಹ ನಾಜೂಕಾದ ಅಪಾಯಕ ರವಾದ ಈ ಘಟ್ಟವನ್ನು ದಾಟಿಸುವಂತಹವರು ಎಂದರೆ ಶಾಲೆಯಲ್ಲಿ ಗುರುಗಳು ಮತ್ತು ಮನೆಯಲ್ಲಿ ಪೋಷಕರು. ಪ್ರತಿಯೊಂದು ಹಂತದಲ್ಲೂ ನಮ್ಮ ಜೀವನದಲ್ಲಿ ಪಾಠ ಕಲಿಸಿದವರೆಲ್ಲರೂ ಗುರುಗಳೇ ಎಂದು ಬಣ್ಣಿಸಿದರು.

ಈ ಶಿಕ್ಷಣ ವ್ಯವಸ್ಥೆ ಪಾಶ್ಚಿಮಾತ್ಯರನ್ನು ಅನುಕರಿಸು ವಂತದ್ದು, ನಾಲ್ಕು ಗೋಡೆಗಳ ಮಧ್ಯೆ ಕೊಡುವ ಶಿಕ್ಷಣ ಜೀವನ್ಮುಖಿಯಾಗಿರುವುದಿಲ್ಲ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು. ವಿದ್ಯಾರ್ಥಿಗಳು ಕೇವಲ ವೈದ್ಯರು ಮತ್ತು ಇಂಜಿನಿಯರ್ ಆಗಬೇಕೆಂದುಕೊಳ್ಳುತ್ತಾರೆ. ಆದರೆ ಒಳ್ಳೆಯ ಶಿಕ್ಷಕರು, ವಕೀಲರು, ಆರಕ್ಷಕರು, ರೈತರು, ಸೈನಿಕರು, ರಾಜಕಾರಣಿಗಳು ನಮ್ಮ ದೇಶಕ್ಕೆ ಬೇಕಾಗಿದೆ ಎಂದರು.

ಇಂದಿನ ಮಕ್ಕಳು ತಾಂತ್ರಿಕತೆಯಿಂದ ಮೊಬೈಲ್, ಲ್ಯಾಪ್‌ಟಾಪ್ ಮೊದಲಾದವನ್ನು ಬಳಸುತ್ತಾ ಮಂಗಗಳಂತಾಗಿದ್ದಾರೆ. ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತಾಗಿದೆ. ಇಂದಿನ ತಂತ್ರಜ್ಞಾನದಿಂದಾಗಿ ಮಕ್ಕಳು ಸುತ್ತಮುತ್ತಲ ಪರಿಸರವನ್ನು ಗಮನಿಸುವುದಿಲ್ಲ, ಸ್ವಾರ್ಥಿಗಳಾಗುತ್ತಿ ದ್ದಾರೆ. ಸಮಾಜಕ್ಕೆ ಕೊಡುಗೆಗಳನ್ನು ಕೊಡುವಂತವರಾಗಬೇಕು ಎಂದು ಹೇಳಿದರು.

ಜಾಗತೀಕರಣ ಹೆಚ್ಚಾದಂತೆ, ನಾವು ನಮ್ಮ ದೇಶೀ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಮಕ್ಕಳು ನಮ್ಮ ಸಂಸ್ಕೃತಿಯನ್ನು ಮತ್ತು ದೇಶಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕೆಂದು ಅವರು ಹಿತ ನುಡಿದರು.

ಶಾಲಾಡಳಿತ ಮಂಡಳಿ ಅಧ್ಯಕ್ಷರಾದ ಕೆ.ಆರ್. ಸುಜಾತ ಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಈಶ್ವರಮ್ಮ ಶಾಲಾಡಳಿತ ಮಂಡಳಿಯ ಕಾರ್ಯದರ್ಶಿ ಎ.ಆರ್.ಉಷಾರಂಗನಾಥ್, ಪ್ರಾಂಶುಪಾಲ ಕೆ.ಎಸ್. ಪ್ರಭುಕುಮಾರ್, ಉಪ ಪ್ರಾಂಶುಪಾಲರಾದ ಜಿ.ಎಸ್. ಶಶಿರೇಖಾ ಹಾಜರಿದ್ದರು.

ವಿದ್ಯಾರ್ಥಿನಿಯರಾದ ಬಿ.ಎನ್. ಭಾವನಾ ಮತ್ತು ಎ.ಪಿ. ಭೂಮಿಕ ನಿರೂಪಿಸಿದರು. ಎಂ.ಯು. ರೋಹಿಣಿ ಸ್ವಾಗತಿಸಿದರು. ಜಿ.ಎಸ್.ಮೇಘನಾ ವಂದಿಸಿದರು.

ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ. ಫೋನ್ ; 08192-275317

ಮಾನ್ಯ ಸದಸ್ಯರುಗಳ ಗಮನಕ್ಕೆ

ಸಂಘದ ಸದಸ್ಯರ ಮಕ್ಕಳಿಗೆ SSLC ಮತ್ತು ದ್ವಿತೀಯ PUCಯಲ್ಲಿ ಶೇಕಡ 90%ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿ.: 17.09.2024ರ ಮಧ್ಯಾಹ್ನ 12.00 ಗಂಟೆಯೊಳಗೆ ಕಛೇರಿಗೆ ನಕಲು ಪ್ರತಿಯೊಂದಿಗೆ ಅಂಕಪಟ್ಟಿ ಹಾಗೂ ಆಧಾರ್ ಕಾರ್ಡ್ ಲಗತ್ತಿಸಬೇಕಾಗಿ ಕೋರಿದೆ. ವಾರ್ಷಿಕ ಮಹಾಸಭೆಗೆ ಬರುವಾಗ ಕಡ್ಡಾಯವಾಗಿ ವಾರ್ಷಿಕ ವರದಿ ಪುಸ್ತಕದೊಂದಿಗೆ ಹಾಜರಾಗಲು ವಿನಂತಿ.

ಕಾರ್ಯಕಾರಿ ಮಂಡಳಿಯ ಆದೇಶದ ಪರವಾಗಿ
ಸಹಿ/- (ಜೆ. ವಿಜಯಕುಮಾರ್) ಕಾರ್ಯದರ್ಶಿ


## ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ, ಸೆ.11 - ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಾದರಿ ವೃತ್ತಿ ಕೇಂದ್ರದಿಂದ ನಾಡಿದ್ದು ದಿನಾಂಕ 13 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ 51 ರಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಈ ಮೇಳದಲ್ಲಿ ಖಾಸಗಿ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ: 8105122556, 08192-259446 ಸಂಪರ್ಕಿಸಲು ಉದ್ಯೋಗಾಧಿಕಾರಿ ರವೀಂದ್ರ ತಿಳಿಸಿದ್ದಾರೆ.

### ಓದುಗರ ಪತ್ರ

## ದಾಳಿಕೋರ ಬೀದಿ ನಾಯಿಗಳಿಂದ ರಕ್ಷಿಸಿ


(ಸಾಂದರ್ಭಿಕ ಚಿತ್ರ)

ಮಾನ್ಯರೇ,

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಹಾಗೂ ಶಂಕರ ವಿಹಾರ ಬಡಾವಣೆಯಲ್ಲಿ ದಾಳಿಕೋರ ಬೀದಿ ನಾಯಿಗಳ ಅಟ್ಟಹಾಸ ಹೆಚ್ಚಾಗಿದೆ. ಇಲ್ಲಿನ ಪ್ರತಿ ರಸ್ತೆಗಳಲ್ಲೂ 15ರಿಂದ 20 ಬೀದಿ ನಾಯಿಗಳು ಪ್ರತಿ ನಿತ್ಯ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಲೇ ಇದ್ದು, ಬಡಾವಣೆ ನಿವಾಸಿಗಳ ನಿದ್ದೆಗೆಡಿಸಿವೆ.

ಅಂಗಡಿಯಿಂದ ದಾಸ್ತಾನು ಹಾಗೂ ಆಹಾರ ಪದಾರ್ಥವನ್ನು ಕೈಯಲ್ಲಿ ಹಿಡಿದುಕೊಂಡು ಹೋಗುವಾಗ ಈ ನಾಯಿಗಳು ದಾಳಿ ನಡೆಸಿ ಚೀಲ ಕಿತ್ತುಕೊಂಡು ಹೋಗುತ್ತವೆ.

ಶಾಲಾ ಮಕ್ಕಳು ಹಾಗೂ ವಯೋವೃದ್ಧರು ರಸ್ತೆಯಲ್ಲಿ ಏಕಾಂಗಿಯಾಗಿ ಸಂಚರಿಸದಂತೆ ಇಲ್ಲಿನ ಶ್ವಾನಗಳು ಭಯ ಸೃಷ್ಟಿಸಿವೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಬೀದಿ ನಾಯಿಗಳನ್ನು ಇಲ್ಲಿಂದ ಸ್ಥಳಾಂತರಿಸಿ ಸಮಸ್ಯೆ ಬಗೆಹರಿಸಿ.

- 15ನೇ ವಾರ್ಡಿನ ನೊಂದ ನಾಗರಿಕರು

## ಸಂತ ಪೌಲರ ಪಿಯು ಕಾಲೇಜಿನ ಮಕ್ಕಳು ಜಿಲ್ಲಾ ಮಟ್ಟಕ್ಕೆ ಆಯ್ಕೆ



ದಾವಣಗೆರೆ, ಸೆ.11- ಸಂತ ಪೌಲರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಈಚೆಗೆ ನಡೆದ ತಾಲ್ಲೂಕು ಮಟ್ಟದ ಪದವಿ ಪೂರ್ವ ವಿದ್ಯಾರ್ಥಿಗಳ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಉತ್ತಮ ಸಾಧನೆಯೊಂದಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಚೆಸ್‌ನಲ್ಲಿ ಸಿ.ಎನ್. ವೇದಶ್ರೀ (ಪ್ರಥಮ), 1500 ಮೀಟರ್ ಹಾಗೂ 3000 ಮೀಟರ್ ಓಟದಲ್ಲಿ ಸಿ. ಮಮತ (ಪ್ರಥಮ), ಗುಡ್ಡಗಾಡು ಓಟದಲ್ಲಿ (5ನೇ ಸ್ಥಾನ), 800 ಮೀ ಓಟದಲ್ಲಿ ಟಿ. ಮಾನಸ (ತೃತೀಯ), 3000 ಮೀ ಓಟದಲ್ಲಿ ಆರ್. ಸಿಂಧೂ (ದ್ವಿತೀಯ) ಸ್ಥಾನ ಪಡೆದಿದ್ದಾರೆ.

ವಾಕ್ ರೇಸ್‌ನಲ್ಲಿ ಆರ್. ಗೌತಮಿ (ಪ್ರಥಮ), ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ವಿ. ಪವಿತ್ರ (ಪ್ರಥಮ), ತ್ರಿಬಲ್ ಜಂಪ್ ಹಾಗೂ ಗುಡ್ಡಗಾಡು ಓಟದಲ್ಲಿ ಕೆ. ಎಸ್. ಗೀತಾಂಜಲಿ (ತೃತೀಯ), ಗುಂಡು ಎಸೆತದಲ್ಲಿ ಎಸ್. ಜ್ಯೋತಿ (ದ್ವಿತೀಯ), 100ಮೀ ಹರ್ಡಲ್ಸ್ ಓಟದಲ್ಲಿ ಎಚ್. ಕಾವ್ಯ (ಪ್ರಥಮ), 400 ಮೀ ಹರ್ಡಲ್ಸ್‌ನಲ್ಲಿ ಪಿ. ಶ್ರೀನಿಧಿಗೆ ದ್ವಿತೀಯ ಸ್ಥಾನ ಲಭಿಸಿದೆ.

100 ಮೀ. ಹಾಗೂ 400 ಮೀ. ಹರ್ಡಲ್ಸ್ ಓಟದಲ್ಲಿ ಪಿ. ಭೂಮಿಕಾ (ತೃತೀಯ) ಓಪನ್ ಕರಾಟೆ ನ್ಯಾಷನಲ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಆರ್.ಎಲ್. ಭುವನಾ ಪ್ರಥಮ ಸ್ಥಾನ ಪಡೆದಿದ್ದಾರೆ.

RELIANCE

ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕೆಲಸಕ್ಕೆ ಬೇಕಾಗಿದ್ದಾರೆ
ಲೈಫ್ ಪ್ಲಾನಿಂಗ್ ಆಫೀಸರ್
LIFE PLANNING OFFICER
ಮಹಿಳೆಯರಿಗೆ ಮಾತ್ರ...
ONLY FOR LADIES



* ಸಂಬಳ ತಿಂಗಳಿಗೆ ರೂ. 14,000 ದಿಂದ 18,000 (ಇಎಸ್‌ಐ,ಪಿಎಫ್ ಸೌಲಭ್ಯವಿರುತ್ತದೆ.)
* ವಯಸ್ಸು 30 ವರ್ಷದಿಂದ 45 ವರ್ಷದವರಿಗೆ ಮಾತ್ರ
* ವಿದ್ಯಾರ್ಹತೆ : ಯಾವುದೇ ಪದವೀಧರರು (Any Degree)
* ಕಂಪನಿಯ ಆನ್ ರೋಲ್, ನಿಗದಿತ ಸಂಬಳದ, ಖಾಯಂ ಹುದ್ದೆಯಾಗಿರುತ್ತದೆ. (Fixed Salary, Permanent Job)

BSC AVENUE
2nd floor, AVK College Road, Opp. : Chetana Hotel Davangere. Above State bank of India.
Ph. : 98440 98800

## ಸರ್ಕಾರಿ ಐಟಿಐ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಸೆ.11- ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಂ.ಎಂ.ಟಿ.ಎಂ 1, ಡಿಎಂಎಂ 20, ಸಿಒಪಿಎ 20, ವೆಲ್ಡರ್ 34 ಹಾಗೂ ರೋಬೋಟಿಕ್ಸ್ 12 ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕೆ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರನ್ನು ಸಂಪರ್ಕಿಸಬಹುದು.

## ನಗರದಲ್ಲಿಂದು ಓರಿಯೆಂಟೇಷನ್ ಪ್ರೋಗ್ರಾಂ

ಮುದೇಗೌಡ್ರು ರೇವಣಸಿದ್ದಪ್ಪ ಸ್ಕೂಲ್ ಆಫ್ ಇನ್ಫಾರ್ಮೇಷನ್ ಕಾಲೇಜ್ ಬಿಸಿಎ, ಬಿಕಾಂ ಐಕ್ಯೂಎಸಿ ವತಿಯಿಂದ ಕಾಲೇಜಿನಲ್ಲಿ ಇಂದಿನಿಂದ 3 ದಿನ ಓರಿಯೆಂಟೇಷನ್ ಪ್ರೋಗ್ರಾಂ ನಡೆಯಲಿದೆ.

ಇಂದು ಬೆಳಿಗ್ಗೆ 9 ಗಂಟೆಗೆ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮಕ್ಕೆ ಜಿಎಫ್‌ಸಿಸಿ ಸಹಾಯಕ ಪ್ರಾಧ್ಯಾಪಕ ಡಾ.ವೆಂಕಟೇಶಬಾಬು ಮುಖ್ಯ ಅತಿಥಿಗಳಾಗಿ ಆಗಮಿಸುವರು. ಪ್ರಾಂಶುಪಾಲ ಕೆ.ಎಸ್.ಮುನವಳ್ಳಿ ಮಠ್ ಉಪಸ್ಥಿತರಿರುವರು.

ನೋಂದಣಿ ಸಂಖ್ಯೆ:ಎಆರ್31/ಆರ್‌ಜಿಎನ್/ಸೌಹಾರ್ದ/4721/2017-2018

ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ
ನಂ. 712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ-577 001.

ಏಳನೇ ವಾರ್ಷಿಕ ಮಹಾಸಭೆಯ ನೋಟೀಸ್

ಸಹಕಾರಿಯ 2023-24ನೇ ಸಾಲಿನ 7ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಸಂಸ್ಥಾಪಕಾಧ್ಯಕ್ಷರಾದ **ಶ್ರೀ ಟಿ.ಎಂ. ಪಾಲಾಕ್ಷ** ಇವರ ಅಧ್ಯಕ್ಷತೆಯಲ್ಲಿ **ದಿನಾಂಕ : 14.09.2024ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ದಿ ದಾವಣಗೆರೆ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ** ಇಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ಅರ್ಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಿ, ಈ ಆಹ್ವಾನ ಪತ್ರಿಕೆ ಮೂಲಕ ಅರ್ಹ ಸದಸ್ಯರು ವಾರ್ಷಿಕ ಮಹಾಸಭೆಗೆ ಹಾಜರಾಗಬೇಕೆಂದು ಆಡಳಿತ ಮಂಡಳಿಯ ಪರವಾಗಿ ವಿನಂತಿಸಲಾಗಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- (ಮಹಮ್ಮದ್ ಉಬೇದುಲ್ಲಾ), ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಹಲವು ಯೋಜನೆಗಳ ಮೂಲಕ ಕೈಮಗ್ಗ ಉದ್ಯಮಕ್ಕೆ ಉತ್ತೇಜನ

## ಸ್ವಕುಳಸಾಳಿ ಸಮಾಜದ ಭಗವಾನ್ ಶ್ರೀ ಜಿಹ್ವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಸೆ. 11- ಸರ್ಕಾರದ ವಿಶೇಷ ಯೋಜನೆಗಳನ್ನು ರೂಪಿಸುವ ಮೂಲಕ ಸ್ವದೇಶಿ ಕೈಮಗ್ಗ ಉದ್ಯಮಕ್ಕೆ ಉತ್ತೇಜನ ನೀಡಲಾಗುವುದು ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ಸ್ವಕುಳ ಸಾಳಿ ಸಮಾಜದ ವತಿಯಿಂದ ಕಳೆದ ವಾರ ಹಮ್ಮಿಕೊಂಡಿದ್ದ ಭಗವಾನ್ ಶ್ರೀ ಜಿಹ್ವೇಶ್ವರ ಜಯಂತ್ಯುತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೈಮಗ್ಗ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿದ್ದು, ಪ್ರಚಾರದ ಅಗತ್ಯವಿದೆ. ನೇಕಾರ ಸಮುದಾಯದ ಮಹಿಳೆಯರನ್ನು ಸ್ವಾವಲಂಬಿಯನ್ನಾಗಿ ಮಾಡುವ ಉದ್ದೇಶದಿಂದ ಮತ್ತು ಸ್ವದೇಶಿ ಉತ್ಪನ್ನಗಳ ತಯಾರಿಕೆ ಕುರಿತಂತೆ ಅವರಿಗೆ ವಿಶೇಷ ಕಾರ್ಯಾಗಾರಗಳ ಮೂಲಕ ತರಬೇತಿ ನೀಡಲಾಗುವುದು ಎಂದರು.

ಸ್ವಕುಳಸಾಳಿ ಸಮುದಾಯದವರ ಮೂಲ ಕಸುಬು ನೇಕಾರಿಕೆಯಾಗಿದ್ದು, ಸಮುದಾಯದವರ ಸಮಸ್ಯೆಗಳು, ಬೇಡಿಕೆಗಳಿದ್ದಲ್ಲಿ ತಮ್ಮ ಗಮನಕ್ಕೆ ತಂದರೆ ಪರಿಹಾರ ನೀಡುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಜಡೇಸಿದ್ಧೇಶ್ವರ ಶಿವಯೋಗಾಶ್ರಮದ ಶ್ರೀ ಶಿವಾನಂದ ಸ್ವಾಮೀಜಿ ಮಾತನಾಡಿ, ಭಾರತೀಯ ಸಂಸ್ಕೃತಿ ಅತ್ಯಂತ ಶ್ರೇಷ್ಠವಾದುದು. ಭಾರತದಲ್ಲಿ ಆಚರಿಸಲಾಗುವ ಪ್ರತಿಯೊಂದು ಹಬ್ಬಗಳಲ್ಲೂ ಆಧ್ಯಾತ್ಮದ ತತ್ವ ಅಡಗಿದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ನಾವುಗಳೆಲ್ಲರೂ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿದ್ದೇವೆ. ಭಾರತೀಯ ಸಂಸ್ಕೃತಿ, ಆಚಾರ-ವಿಚಾರಗಳನ್ನು ಮರೆಯುತ್ತಿರುವುದು ವಿಷಾದದ ಸಂಗತಿ ಎಂದು ಹೇಳಿದರು.

ಯಾರು ಧರ್ಮದ ಹಾದಿಯಲ್ಲಿ ನಡೆಯುತ್ತಾರೋ ಅವರು ಧರ್ಮಾತ್ಮರೆನಿಸಿಕೊಳ್ಳುತ್ತಾರೆ. ಮನುಷ್ಯ ಎಷ್ಟೇ ಸಿರಿ-ಸಂಪತ್ತು, ಆಸ್ತಿ-ಅಂತಸ್ತು ಹೊಂದಿದ್ದರೂ ಸಹ ದಾನ, ಧರ್ಮದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳದಿದ್ದರೆ ಬದುಕು ಸಾರ್ಥಕವಾಗುವುದಿಲ್ಲ ಎಂದರು.

ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಮೋಹನ್ ಪಿ. ಗಾಯಕವಾಡ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ದೂಡಾ ಮಾಜಿ ಅಧ್ಯಕ್ಷ ಮಾಲತೇಶರಾವ್ ಜಾಧವ್, ವೃತ್ತಿಪರ ಪತ್ರಬರಹಗಾರರ ಅಸೋಸಿಯೇಷನ್ ಅಧ್ಯಕ್ಷ ಡಿ.ಕೆ. ಸಂಗಮೇಶ್ ಎಲಿಗಾರ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸ್ವಕುಳಸಾಳಿ ಸಮಾಜದ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು. ಕ್ಷೀರಸಾಗರ ಗಣೇಶ್ ಸ್ವಾಗತಿಸಿದರು. ಸಹ ಕಾರ್ಯದರ್ಶಿ ವಾಸುದೇವ ಸಾಕ್ರೆ ವಂದಿಸಿದರು.

ಸ್ವಕುಳಸಾಳಿ ಸಮಾಜದ ಉಪಾಧ್ಯಕ್ಷ ಸುರೇಂದ್ರ ವಾಂಜ್ರೆ, ಸ್ವಕುಳಸಾಳಿ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಸುಜಾತಾ ರೋಖಡೆ, ಸ್ವಕುಳಸಾಳಿ ಯುವ ಸಮಿತಿ ಅಧ್ಯಕ್ಷ ನಂದಕಿಶೋರ ಭಂಡಾರೆ, ಪ್ರಧಾನ ಕಾರ್ಯದರ್ಶಿ ಸಂತೋಷ್ ಏಕಬೋಟೆ ಇನ್ನಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ 2023-24 ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ, ಡಿಪ್ಲೋಮಾ, ಪದವಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸ್ವಕುಳ ಸಾಳಿ ಸಮಾಜದ ವಿದ್ಯಾರ್ಥಿ - ವಿದ್ಯಾರ್ಥಿನಿಯರನ್ನು ಗೌರವಿಸಲಾಯಿತು.




## ಬಗೆಹರಿಯದ ಸಮಸ್ಯೆ : ಓಲಾ ಗ್ರಾಹಕನಿಂದ ಶೋರೂಂಗೆ ಬೆಂಕಿ

ಕಲಬುರಗಿ, ಸೆ. 11 - ಹಲವು ಬಾರಿ ದೂರು ನೀಡಿದರೂ ದ್ವಿಚಕ್ರ ವಾಹನದ ಸಮಸ್ಯೆ ಬಗೆಹರಿಯದ ಕಾರಣ ಓಲಾ ಎಲೆಕ್ಟ್ರಿಕ್ ಶೋರೂಂಗೆ ವ್ಯಕ್ತಿಯೋರ್ವ ಬೆಂಕಿ ಹಚ್ಚಿದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೊಹಮ್ಮದ್ ನದೀಮ್ ಎಂಬ 26 ವರ್ಷದ ವ್ಯಕ್ತಿ ಮಂಗಳವಾರ ಓಲಾ ಶೋರೂಂಗೆ ತೆರಳಿ ಆರು ಬೈಕುಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ. ನಂತರ ಬೆಂಕಿ ಇಡೀ ಶೋರೂಂಗೆ ಹರಡಿದೆ. ಪೊಲೀಸರು ನದೀಮ್ ಬಂಧಿಸಿದ್ದಾರೆ.

ಆಗಸ್ಟ್ ತಿಂಗಳಲ್ಲಿ ನದೀಮ್ ಎಲೆಕ್ಟ್ರಿಕ್ ಸ್ಕೂಟರ್ ಖರೀದಿಸಿದ್ದರು. ನಂತರ ಸಮಸ್ಯೆಗಳು ಎದುರಾಗಿದ್ದವು. ಈ ಹಿನ್ನೆಲೆಯಲ್ಲಿ ಹಲವು ಬಾರಿ ಶೋರೂಂಗೆ ಭೇಟಿ ನೀಡಿದ್ದರೂ ಅಲ್ಲಿನ ಸಿಬ್ಬಂದಿ ಸಮಸ್ಯೆ ಬಗೆಹರಿಸಿರಲಿಲ್ಲ. ಇದರಿಂದ ಉಭಯರಿಗೂ ವಾಗ್ವಾದ ನಡೆದಿತ್ತು. ಹತಾಶಗೊಂಡ ಯುವಕ ಬೆಂಕಿ ಹಚ್ಚಿದ್ದಾನೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# 70 ಮೀರಿದ ಎಲ್ಲರಿಗೂ 'ಆಯುಷ್ಮಾನ್ ಭಾರತ್'

**ಸಂಪುಟದ ಒಪ್ಪಿಗೆ**

ನವದೆಹಲಿ, ಸೆ. 11 - 70 ವರ್ಷ ಮೀರಿದ ಎಲ್ಲರಿಗೂ ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ ಆರೋಗ್ಯ ಸೇವೆ ಒದಗಿಸುವ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ವ್ಯಕ್ತಿಗಳ ಆದಾಯ ಎಷ್ಟೇ ಇದ್ದರೂ 70 ವರ್ಷ ಮೀರಿದ ಎಲ್ಲರೂ ಆಯುಷ್ಮಾನ್ ಭಾರತ್ ಯೋಜನೆಗೆ ಒಳಪಡಲಿದ್ದಾರೆ. ಇವರು ಐದು ಲಕ್ಷ ರೂ.ಗಳ ಉಚಿತ ವಿಮೆ ಸೌಲಭ್ಯ ಪಡೆಯಲಿದ್ದಾರೆ. ಇದು ಆರು ಕೋಟಿ ಜನರಿಗೆ ನೆರವಾಗಲಿದೆ. 70 ವರ್ಷ ಮೀರಿದವರಿಗೆ ವಿಶಿಷ್ಟ ಗುರುತಿನ ಕಾರ್ಡುಗಳನ್ನು ನೀಡಲಾಗುವುದು ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಈಗಾಗಲೇ ಆಯುಷ್ಮಾನ್ ಭಾರತ್ ಯೋಜನೆಗೆ ಒಳಪಟ್ಟಿರುವ ಕುಟುಂಬಗಳಿಗೆ ಸೇರಿದ 70 ವರ್ಷ ಮೀರಿದವರಿಗೆ ಹೆಚ್ಚುವರಿಯಾಗಿ ಐದು ಲಕ್ಷ ರೂ.ಗಳ ಆರೋಗ್ಯ ವಿಮೆ ನೀಡಲಾಗುವುದು. ಈ ಮೊತ್ತವನ್ನು ಕುಟುಂಬದ ಇತರೆ ಸದಸ್ಯರು ಪಡೆಯುವಂತಿಲ್ಲ.

ಖಾಸಗಿ ಆರೋಗ್ಯ ವಿಮೆ ಇಲ್ಲವೇ ಉದ್ಯೋಗಿಗಳ ಸರ್ಕಾರಿ ವಿಮೆ ಯೋಜನೆ ವ್ಯಾಪ್ತಿಯಲ್ಲಿರುವ 70 ವರ್ಷ ಮೀರಿದವರೂ ಸಹ ಆಯುಷ್ಮಾನ್ ಭಾರತ್ ಯೋಜನೆಗೆ ಒಳಪಡಲಿದ್ದಾರೆ.

ಆದರೆ ಕೇಂದ್ರ ಸರ್ಕಾರ ಆರೋಗ್ಯ ವಿಮೆ, ಆಯುಷ್ಮಾನ್ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಮುಂತಾದ ಸಾರ್ವಜನಿಕ ಆರೋಗ್ಯ ವಿಮೆ ಯೋಜನೆಯಲ್ಲಿ ಇರುವವರು ಈಗಿರುವ ಯೋಜನೆಯಲ್ಲಿ ಮುಂದುವರೆಯಬೇಕು ಇಲ್ಲವೇ ಆಯುಷ್ಮಾನ್ ಭಾರತ್ ಆಯ್ಕೆ ಮಾಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಕಡಿಮೆ ವೆಚ್ಚದಲ್ಲಿ ಉನ್ನತ ಗುಣಮಟ್ಟದ ಆರೋಗ್ಯ ಸೇವೆಯನ್ನು ದೇಶದ ಪ್ರತಿಯೊಬ್ಬರಿಗೂ ಒದಗಿಸಲು ನಾವು ಬದ್ಧರಾಗಿದ್ದೇವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸಂಪುಟ ಆಯುಷ್ಮಾನ್ ಭಾರತ್ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿದೆ. ಇದರಿಂದಾಗಿ 70 ವರ್ಷ ಮೀರಿದ ಆರು ಕೋಟಿ ನಾಗರಿಕರಿಗೆ ಘನತೆ, ಕಾಳಜಿ ಹಾಗೂ ಸುರಕ್ಷತೆ ಸಿಗಲಿದೆ ಎಂದಿದ್ದಾರೆ.

ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂ.ಗಳ ವಿಮೆ ನೀಡಲಾಗುತ್ತದೆ. 12.34 ಕೋಟಿ ಕುಟುಂಬಗಳ 55 ಕೋಟಿ ಜನರು ಈ ಸೌಲಭ್ಯ ಪಡೆಯುತ್ತಿದ್ದಾರೆ.




## ಗಣಪತಿ ಮಂಟಪದ ಸುತ್ತ ಪದ್ಮಶ್ರೀ, ಭಾರತ ರತ್ನ ಪ್ರಶಸ್ತಿ ಪುರಸ್ಕೃತರ ಪರಿಚಯ



ದಾವಣಗೆರೆ, ಸೆ.11- ಸ್ಥಳೀಯ ಭಗತ್ ಸಿಂಗ್ ನಗರದ ಆಟೋ ನಿಲ್ದಾಣದ ಬಳಿ ಗುರುದ್ರೋಣ ಕ್ರೀಡಾ ಸಮಿತಿ ಹಾಗೂ ವಿನಾಯಕ ಗೆಳೆಯರ ಬಳಗದಿಂದ 11ನೇ ವರ್ಷದ ಗಣೇಶೋತ್ಸವ ಆಚರಿಸಲಾಗುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಇಲ್ಲಿನ ಮಂಟಪ ವಿಶೇಷತೆ ಹೊಂದಿದೆ. ಈ ಬಾರಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸುವ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿದೆ. ಹೆಸರಾಂತ ಕ್ರೀಡಾಪಟುಗಳು, ಕಾರ್ಗಿಲ್ ವೀರ ಯೋಧರು, ರಾಷ್ಟ್ರಕವಿಗಳು, ಚಲನಚಿತ್ರ ಕಲಾವಿದರು, ಭಾರತ ರತ್ನ ಪ್ರಶಸ್ತಿ ಪುರಸ್ಕೃತರು ಮೊದಲಾದ ಫ್ಲೆಕ್ಸ್‌ಗಳು ಇಲ್ಲಿವೆ.

**ಭದ್ರಾ ಜಲಾಶಯ**

ನೀರಿನ ಮಟ್ಟ : 186
ಒಳ ಹರಿವು : 8778 ಕ್ಯೂಸೆಕ್ಸ್ ಹೊರ ಹರಿವು : 7598 ಕ್ಯೂಸೆಕ್ಸ್
ಕಳೆದ ವರ್ಷ : 161 ಅಡಿ 9 ಇಂಚು

## 62,500 ಕಿ.ಮೀ. ಗ್ರಾಮ ಸಡಕ್ ಯೋಜನೆ ಒಪ್ಪಿಗೆ

ನವದೆಹಲಿ, ಸೆ. 11 - ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ 4ನೇ ಹಂತಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ಈ ಯೋಜನೆ ಅನ್ವಯ ಗ್ರಾಮೀಣ ಭಾಗದಲ್ಲಿ 62,500 ಕಿಲೋಮೀಟರ್ ಉದ್ದದ ರಸ್ತೆಗಳನ್ನು ನಿರ್ಮಿಸಲಾಗುವುದು.ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಲಾಗಿದೆ. ಯೋಜನೆಯ ಅನ್ವಯ ಸಂಪರ್ಕ ಪಡೆಯದೇ ಇರುವ 25,000 ತಾಣಗಳಿಗೆ 62,500 ಕಿಲೋಮೀಟರ್ ರಸ್ತೆಗಳನ್ನು ನಿರ್ಮಿಸಲಾಗುವುದು.

## ಕೋಳಿ, ಕುರಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ.11- ನಗರದ ಪಶು ಆಸ್ಪತ್ರೆ ಆವರಣದ ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರ ಬೇತಿ ಕೇಂದ್ರದಲ್ಲಿ ಆಧುನಿಕ ಹೈನುಗಾರಿಕೆ, ಕೋಳಿ, ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಶಿಬಿರ ಆಯೋಜಿಸಲಾಗಿದೆ.

ಆಧುನಿಕ ಹೈನುಗಾರಿಕೆ ತರಬೇತಿಯು ನಾಳೆ ದಿನಾಂಕ 12, 13, 25 ಮತ್ತು 26ಕ್ಕೆ, ಕೋಳಿ ಸಾಕಾಣಿಕೆ ಇದೇ ದಿನಾಂಕ 17 ಮತ್ತು 18ಕ್ಕೆ, ಕುರಿ ಮೇಕೆ ಸಾಕಾಣಿಕೆ ಇದೇ ದಿನಾಂಕ 20 ಮತ್ತು 21 ರಂದು ನಡೆಯ ಲಿವೆ. ಮಾಹಿತಿಗಾಗಿ 08192-233787 ಸಂಪರ್ಕಿಸಿ.







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas